31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ :01 (ಕೃಷಿ)ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ :01 ಕೃಷಿ (ಬಯಲು ಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕೃಷಿ (ಬಯಲು ಸೀಮೆ ಅಭಿವೃದ್ಧಿ ಮಂಡಳಿ ಹೊರತುಪಡಿಸಿ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 335,81,29,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,04,35,000 ರೂಪಾಯಿಗಳಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಬೇಡಿಕೆ ಸಂಖ್ಯೆ -2

ತೋಟಗಾರಿಕೆ ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ವಿಚಾರದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಮ್ಮ ರಾಜ್ಯದಲ್ಲಿ ಪ್ರತಿ ಜಿಲ್ಲೆಗಳಿಗೆ, ತಾಲ್ಲೂಕು ಗಳಿಗೆ ಹೋಗಿ ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಾಡಬೇಕೆಂದು ಶ್ರಮಿಸಿರುವವರಲ್ಲಿ ಡಾ: ಮರೀಗೌಡರ ಕೊಡುಗೆ ಬಹಳ ಇದೆ. ಭಾರತ ದೇಶದಲ್ಲಿ ಬಹಳಷ್ಟು ರಾಜ್ಯದಲ್ಲಿ ತೋಟಗಾರಿಕೆಯ ಬೆಳವಣಿಗೆಯನ್ನು ನೋಡಿದರೆ ನಮ್ಮ ರಾಜ್ಯ ಎರಡನೇ ಸ್ಥಾನದಲ್ಲಿದೆ. ನಮ್ಮ ರಾಜ್ಯದಲ್ಲಿ ತೋಟಗಾರಿಕೆಯ ವಿಸ್ತೀರ್ಣ 17ಲಕ್ಷ ಹೆಕ್ಟೇರ್ ಇದೆ. ತೋಟಗಾರಿಕೆ ಬೆಳೆಯ ಉತ್ಪಾದನೆ ಸುಮಾರು 5,319 ಕೋಟಿ ರೂಪಾಯಿಗಳು ನಮ್ಮ ರಾಜ್ಯದ ಬೊಕ್ಕಸಕ್ಕೆ ಸಿಗುತ್ತದೆ. ಕಳೆದ ಐದು ವರ್ಷಗಳಲ್ಲಿ ಇಪ್ಪತ್ತು ಪರ್‌ಸೆಂಟ್ ತೋಟಗಾರಿಕೆಯ ಅಭಿವೃದ್ಧಿಯಾಗಿದೆ. ಜೊತೆಗೆ ಉತ್ಪಾದನೆಯು ಸಹ ಜಾಸ್ತಿಯಾಗಿದೆ. ನಮ್ಮ ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಸುಮಾರು 14-15 ಪರೆಸೆಂಟ್ ಇದೆ. ನಾವು ಕೃಷಿ ಇಲಾಖೆ ಮತ್ತು ತೋಟಗಾರಿಕೆ ಬಗ್ಗೆ ಆಲೋಚನೆ ಮಾಡಿ ನೋಡಿದಾಗ ಬೆಳೆ ಏನು ಬರುತ್ತದೆ ಅದರಲ್ಲಿ ನಲವತ್ತು ಪರ್‌ಸೆಂಟ್

ತೋಟಗಾರಿಕೆಯಿಂದ ಬರುತ್ತದೆ. ನಮ್ಮ ತೋಟಗಾರಿಕೆ ಇಲಾಖೆಯಲ್ಲಿ 415 ತೋಟಗಾರಿಕಾ ಫಾರಂಗಳು ಇವೆ. ಅದರಲ್ಲಿ ಸುಮಾರು ನಾಲ್ಕು ಸಾವಿರ ಹೆಕ್ಟೇರ್‌ನ್ನು ನರ್ಸರಿ ಮತ್ತು ನಾನ್‌ಪ್ರೊಡಕ್ಷನ್ ಮತ್ತು ಇತರ ತೋಟಗಾರಿಕೆಗೆ, ಕಸಿಗಾರಿಕೆಗೆ ಬೇಕಾದಂಥ ಕೆಲಸದಲ್ಲಿ ಬಳಸುತ್ತಿದ್ದೇವೆ. ಇದಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕೆಂದು ಬಾಕಿ ಇರುವ ಜಾಗದಲ್ಲಿ ನಮ್ಮ ರೈತರಿಗೆ ಬೇಕಾದ ಹಣ್ಣಿನ ಗಿಡಗಳನ್ನು ಬೆಳೆಸಬೇಕೆಂದು ಮಹತ್ವವಾದ ಕಾರ್ಯಕ್ರಮವನ್ನು ಇಟ್ಟು ಕೊಂಡಿದ್ದೇವೆ. ಇವತ್ತು ಕರ್ನಾಟಕ ಸ್ಟೇಟ್ ಹಾರ್ಟಿಕಲ್ಚರ್ ಫಾರಂ ಡೆವಲಪ್‌ಮೆಂಟ್ ಏಜೆನ್ಸಿಯನ್ನು ಮಾಡಬೇಕೆಂದು ಸರ್ಕಾರ ಆಲೋಚಿಸಿದೆ. ಈಗಾಗಲೆ ನಮ್ಮ ಕೃಷಿ ಸಚಿವರು, ನಮ್ಮ ರಾಜ್ಯದಲ್ಲಿ ಕೃಷಿಗಿಂತ ತೋಟಗಾರಿಕೆ ಬೆಳೆಯುವುದಕ್ಕೆ ಎಲ್ಲಾ ರೀತಿಯಾದ ವಾತಾವರಣ ಅನುಕೂಲವಾಗಿದೆಯೆಂದು ಹೇಳಿದ್ದಾರೆ. ಇಂದು ಕೇವಲ ಒಂದು ಗ್ರಾಮಕ್ಕೆ ಸೀಮಿತವಾಗಿಲ್ಲ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆಯುವುದಕ್ಕೆ ಒಳ್ಳೆಯ ಅವಕಾಶ ಉಂಟು. ಕಳೆದ ಐದು ವರ್ಷಗಳಲ್ಲಿ ತೋಟಗಾರಿಕೆ ಬೆಳೆಯ ಅಭಿವೃದ್ಧಿ ಬಗ್ಗೆ ನೋಡಿದಾಗ ಬಿಜಾಪುರದಲ್ಲಿ ಕಳೆದ ಎಂಟು ಹತ್ತು ವರ್ಷದಲ್ಲಿ ಏನೇನು ಬೆಳೆ ಬೆಳೆಯುತ್ತಿರಲಿಲ್ಲ, ಅತ್ಯಂತ ಹಿಂದುಳಿದ ಜಿಲ್ಲೆ ಎಂದು ಹೇಳಿಸಿಕೊಳ್ಳುತ್ತಿದ್ದಂಥ ಜಿಲ್ಲೆ ಇಂದು ತೋಟಗಾರಿಕೆ ಬೆಳೆಯಲ್ಲಿ ಬಹಳಷ್ಟು ಅಭಿವೃದ್ಧಿ ಹೊಂದಿದೆ. ಇವತ್ತು ಅತ್ಯಂತ ಉತ್ತಮ ಗುಣಮಟ್ಟದ ದ್ರಾಕ್ಷಿ, ದಾಳಿಂಬೆ, ನಿಂಬೆಹಣ್ಣನ್ನು ಬೆಳೆಯುವುದಕ್ಕೆ ಬಾಗಲಕೋಟೆ, ಬಿಜಾಪುರ ಜಿಲ್ಲೆಗಳು ಹೆಸರುವಾಸಿಯಾಗಿವೆ ಇವತ್ತು ಅವುಗಳನ್ನು ಹೊರದೇಶಕ್ಕೆ ಸಹ ರಫ್ತು ಮಾಡುತ್ತಿದ್ದೇವೆ. ಅದೇ ರೀತಿ ಪ್ರತಿಯೊಂದು ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆ ಅಭಿವೃದ್ಧಿಯಾಗುತ್ತಾ ಬಂದಿದೆ. ಮುಂದೆ ಸಹ ಇದಕ್ಕೆ ಬಹಳಷ್ಟು ಮಹತ್ವ ಇದೆ. ನಮ್ಮ ಮುಖ್ಯಮಂತ್ರಿಗಳು ನಾವು ತೋಟಗಾರಿಕೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕೆಂದು ಕೇಳಿಕೊಂಡಾಗ ಬಹಳಷ್ಟು ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಹೋದ ಸಲದ ಬಜೆಟ್‌ನಲ್ಲಿ ತುಂತುರು ನೀರಾವರಿಗೆ ಕೇವಲ ಒಂದು ಕೋಟಿ ಹಣವನ್ನು ಇಟ್ಟಿದ್ದೆವು. ಆದರೆ ಕಳೆದ ಮಾರ್ಚ್‌ನಿಂದ ತುಂತುರು ನೀರಾವರಿಗೆ ಬಹಳ ಬೇಡಿಕೆ ಇದ್ದಿದ್ದರಿಂದ ರೈತರ ಉಪಯೋಗಕ್ಕಾಗಿ ಹೆಚ್ಚುವರಿ ಎರಡು ಕೋಟಿ ರೂಪಾಯಿಗಳನ್ನು ಅಂದರೆ ಒಟ್ಟಾರೆ ಮೂರು ಕೋಟಿ ರೂಪಾಯಿಗಳನ್ನು ತುಂತುರು ನೀರಾವರಿಗೆ ಅಲೊಕೇಷನ್ ಮಾಡಿ ನಮ್ಮ ಇಲಾಖೆಗೆ ಕೊಟ್ಟಿದ್ದಾರೆ. ಮುಂದಿನ ದಿವಸಗಳಲ್ಲಿ ಒಳ್ಳೆಯ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಇವತ್ತು ಶೃಂಗಸಭೆಯನ್ನು ಧಾರವಾಡದಲ್ಲಿ ಮಾಡಿದ್ದೇವೆ. ಅದಕ್ಕೆ ಪೂರಕವಾಗಿ ಕೃಷಿ ಮತ್ತು ತೋಟಗಾರಿಕೆಗೆ ಕಮೀಷನ್ ಮಾಡಬೇಕೆಂದು ಅದನ್ನು ಈಗಾಗಲೇ ಮಾಡಿದ್ದೇವೆ. ಅನಂತರ ನಾವು ಮುಖ್ಯಮಂತ್ರಿಗಳ ನೇತೃತ್ವದ ಡೆಲಿಗೇಷನ್ ಅನ್ನು ತೆಗೆದುಕೊಂಡು ಎನ್. ಡಿ. ಡಿ. ಬಿ. ಗೆ ಹೋಗಿ ತೋಟಗಾರಿಕೆಯ ಅಭಿವೃದ್ಧಿ ಮಾಡಬೇಕೆಂದು ಸುಮಾರು ಐದು ನೂರು ಕೋಟಿ ರೂಪಾಯಿಗಳನ್ನು ತಂದಿದ್ದೇವೆ. ಅದರಲ್ಲಿ 150 ಕೋಟಿ ರೂಪಾಯಿಗಳನ್ನು ನಮ್ಮ ಇಲಾಖೆಗೆ ಕೊಡಲು ಒಪ್ಪಿರುತ್ತಾರೆ ತೋಟಗಾರಿಕೆ ಬೆಳೆಗಳಿಗೆ ಬಹಳಷ್ಟು ರೋಗಗಳು ಬಂದಿವೆ. ಅಡಿಕೆ ಮತ್ತು ಇತರೆ ಬೆಳೆಗಳಿಗೆ ರೋಗ ಬಂದಿದೆ. ಮೊಟ್ಟಮೊದಲ ಬಾರಿ ಕರ್ನಾಟಕ ರಾಜ್ಯದಲ್ಲಿ ದೊಡ್ಡದಾದ ಯೋಜನೆಯನ್ನು ಹಾಕಿಕೊಂಡು ನುಸಿರೋಗದ ನಿವಾರಣೆಗಾಗಿ ಮೂರು ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದ್ದಾರೆ. ನುಸಿರೋಗ ನಿವಾರಣೆ ಮಾಡುವ ಉದ್ದೇಶದಿಂದ ಔಷಧಿಗಳನ್ನು ಕೊಡುವ ಸಲುವಾಗಿ ಸರ್ಕಾರದಿಂದ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲವಾಗಬೇಕು ಎಂಬ ದೃಷ್ಟಿಯಿಂದ 75 ಪರ್‌ಸೆಂಟ್ ಸಬ್ಸಿಡಿಯನ್ನು ಅವರಿಗೆ ಕೊಟ್ಟಿದ್ದೇವೆ. ಅದೇ ರೀತಿ ಬೇರೆ ಬೇರೆ ರೋಗ ಗಳನ್ನು ಕೆಮಿಕಲ್ಸ್, ಪೆಸ್ಟಿಸೈಡ್ಸ್‌ಗಳಿಂದ ನಿವಾರಣೆ ಮಾಡುವುದು ತಪ್ಪಾಗುತ್ತದೆ, ಪರಿಸರ ಮಾಲಿನ್ಯವಾಗು ತ್ತದೆ

ಎಂಬುದನ್ನು ಅರಿತುಕೊಂಡು ಹೇಗಾದರೂ ಮಾಡಿ ಬಯಾಲಾಜಿಕಲ್ ಆ್ಯನ್‌ಸರ್ ತರಬೇಕೆಂದು ಬಹಳಷ್ಟು ಲ್ಯಾಬೊರೇಟರಿಗಳನ್ನು ಅಭಿವೃದ್ಧಿ ಪಡಿಸುತ್ತಿದ್ದೇವೆ. ತೆಂಗಿನ ಬೆಳೆಗೆ ಬಂದಿ ರುವ ಕಪ್ಪುತಲೆ ಹುಳುವಿನ ನಿವಾರಣೆಗೆ ಈಗಾಗಲೇ ಪ್ಯಾ. ರಾಸೈಟ್ಸುನ್ನು ತಯಾರು ಮಾಡಿದ್ದೇವೆ. ನಮ್ಮ ಸರ್ಕಾರ ಇದರ ಬಗ್ಗೆ ರೆವ್ಯೂ ಮಾಡಿದಾಗ ಬಹಳಷುಟ ಜಿಲ್ಲೆಗಳಲ್ಲಿ ಇದರ ಬಗ್ಗೆ ಕೆಮಿಕಲ್ಸ್‌ನ್ನು, ಪೆಸ್ಟಿ ಸೈಡ್ಸ್‌ನ್ನು ಚುಚ್ಚು ಮದ್ದಿನ ಮೂಲಕ ಕೊಟ್ಟಿದ್ದೇವೆ. ಅದರ ಫಲಿತಾಂಶವನ್ನು ನೋಡಿದಾಗ ಸುಮಾರು 60ರಿಂದ 80 ಪರ್ ಸೆಂಟ್ ಉತ್ತಮ ಫಲಿತಾಂಶ ದೊರಕಿದೆ. ಇದಲ್ಲದೆ ಸರ್ಕಾರ ಮೊಟ್ಟ ಮೊದಲ ಬಾರಿಗೆ ರೈತರ ಕೂಗು ಕೇಳಿದಾಗ, ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ರೈತರು ಆಲೂಗಡ್ಡೆ ಮತ್ತು ಈರುಳ್ಳಿ ಬೆಲೆ ಕುಸಿತದಿಂದ ಮಾರದಿದ್ದಾಗ ಸರ್ಕಾರ ಮಧ್ಯೆ ಪ್ರವೇಶ ಮಾಡಿ ಕನಿಷ್ಟ ಮೂರು ರೂಪಾಯಿಗಳಂತೆ ಖರೀದಿಸಿದ್ದೇವೆ. ರೈತರ ಬಗ್ಗೆ ಕನಿಕರವಿರುವುದರಿಂದ ಸರ್ಕಾರಕ್ಕೆ ಎಷ್ಟೇ ನಷ್ಟವಾ ದರೂ ಸಹ ಸರ್ಕಾರ ಆ ಕೆಲಸ ಮಾಡಿದೆ. ಅನ್ನ ಬೆಂದಿದೆಯೋ ಇಲ್ಲವೋ ಎಂಬುದನ್ನು ನೋಡಲು ನಾವು ಎಲ್ಲವನ್ನು ಮುಟ್ಟಿ ನೋಡುವುದಿಲ್ಲ. ಮೇಲೆ ಇರುವ ಅನ್ನವನ್ನು ಮಾತ್ರ ನೋಡು ತ್ತೇವೆ. ನಮ್ಮ ಸರ್ಕಾರ ಬಂದ ಕೇವಲ ಐದಾರು ತಿಂಗಳ ಅವಧಿಯಲ್ಲಿ ರೈತರ ಇಷ್ಟೊಂದು ಸಮಸ್ಯೆಗಳಿಗೆ ಸ್ಪಂದಿಸಿ ದೆಯೆಂದು ಹೆಮ್ಮೆಯಿಂದ ಹೇಳಬಯಸುತ್ತೇನೆ. ತಾಳೆ ಬೆಲೆ ಬಗ್ಗೆ ಹೇಳುವುದಾ ದರೆ, ಇದು ಕೇಂದ್ರ ಸರ್ಕಾರದ ಯೋಜನೆಯ ಅಡಿಯಲ್ಲಿ ನಮ್ಮ ರಾಜ್ಯದಲ್ಲಿ ಕಳೆದ ಏಳೆಂಟು ವರ್ಷಗಳಿಂದ ಈ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಕೇಂದ್ರ ಸರ್ಕಾರದ ನೀತಿ ಯಿಂದಾಗಿ ಇಂಪೋರ್ಟ್ ಡ್ಯೂಟಿ ಕಡಿಮೆ ಮಾಡಿರುವುದರಿಂದ ನಮ್ಮ ರಾಜ್ಯದಲ್ಲಿ ಎಣ್ಣೆ ಬೆಳೆಗಳ ಬೆಲೆ ಕಡಿಮೆ ಯಾಗಿದೆ, ಬಹಳಷ್ಟು ಎಣ್ಣೆ ಉತ್ಪಾದನೆ ಕಾರ್ಖಾನೆಗಳು ಬಂದ್ ಆಗಿದೆಯೆಂದು ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ. ಕೇಂದ್ರದ ನೀತಿಯಿಂದ ತಾಳೆ ಬೆಲೆಯು ಕಡಿಮೆಯಾಗಿ ರೈತರು ಕಂಗಾಲಾಗಿದ್ದು ಶಿವಮೊಗ್ಗ ಜಿಲ್ಲೆಯಲ್ಲಿ ತಾಳೆ ಗಿಡಗಳನ್ನು ಕಡಿಮೆ ಮುಷ್ಕರ ಮಾಡಿದರು. ಮುಖ್ಯಮಂತ್ರಿಗಳ ಆದೇಶದಂತೆ ನಾವು ಬೇರೆ ರಾಜ್ಯಗಳೊಂದಿಗೆ ಕೇಂದ್ರ ಸರ್ಕಾರದವ ರೊಂದಿಗೆ ಚರ್ಚೆ ಮಾಡಿ ತಾಳೆ ಬೆಳೆಗೆ ಮಿನಿಮಮ್ ಬೆಲೆಯನ್ನು ಕೊಡಿಸಿದ್ದೇವೆಂದು ಹೆಮ್ಮೆಯಿಂದ ಹೇಳಬಯಸುತ್ತೇನೆ.

7. 50 ಪಿ.ಎಂ.

ಇನ್ನು ಹನಿ ನೀರಾವರಿಗಾಗಿ ಮಹಾರಾಷ್ಟ್ರದ ಜೊತೆ ನಾವು ವರ್ಷಕ್ಕೆ 28- 30 ಕೋಟಿ ರೂಪಾಯಿಯಷ್ಟು ಕೇಂದ್ರ ಸರ್ಕಾರದ ನೆರವಿನ ಮೂಲಕ ಸಬ್ಸಿಡಿ ಕೊಡುತ್ತಿದ್ದೇವೆ ಇದನ್ನು ಹೆಚ್ಚಿಗೆ ಬಳಸುತ್ತಿರುವ ರಾಜ್ಯಗಳೆಂದರೆ ದೇಶದಲ್ಲೇ ಮಹಾರಾಷ್ಟ್ರ ಮತ್ತು ಕರ್ನಾಟಕ. ಈ ಹನಿ ನೀರಾವರಿಯಿಂದ ಬಹಳಷ್ಟು ರೈತರಿಗೆ ಅನುಕೂಲವಾಗಿದೆ. ಎಲ್ಲೆಲ್ಲಿ ಕಡಿಮೆ ವೆಚ್ಚದಲ್ಲಿ ನೀರು ಸಿಗುತ್ತದೆ ಅಲ್ಲೆಲ್ಲ ಡ್ರಿಪ್ ಇರಿಗೇಶನ್ ಮೂಲಕ ಬಹಳ ಅನುಕೂಲವಾಗಿದೆ. ಸಂಶೋಧನೆ ಬಗ್ಗೆ ಹಿರಿಯ ಸದಸ್ಯರು ಹೇಳುತ್ತಿದ್ದರು. ಮೆಣಸಿನಗಿಡ, ಆಲೂಗಡ್ಡೆ, ಈರುಳ್ಳಿ ಬಗ್ಗೆ ಇವತ್ತು ಸಂಶೋಧನೆ ಮಾಡಬೇಕಾಗಿದೆ. ಇವುಗಳ ಗುಣಮಟ್ಟದ ಬೀಜಗಳನ್ನು ನಾವು ಉತ್ಪತ್ತಿ ಮಾಡಬೇಕಾಗಿದೆ. ಸಂ ಶೋಧನೆ ನಾವು ಅಂದುಕೊಂಡ ರೀತಿ, ರೈತ ಅಂದುಕೊಂಡ ಲೆವೆಲ್‌ಗೆ ಬರೆದಿದ್ದರೂ ಕೂಡ ಮುಂದಿನ ದಿನಗಳಲ್ಲಿ ಹೊಸ ವೆರೈಟೀಸ್ ಬೇಕಾಗಿರುವ ಕಾರಣದಿಂದ ಸಂಶೋಧನೆ ಮಾಡಬೇಕಾಗಿದೆ. ಈಗಾಗಲೇ ಎನ್‌ಡಿಡಿಬಿಯವರು 10 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ನಿಗದಿಪಡಿಸಿದ್ದಾರೆಂದು ಹೇಳಲು ಇಚ್ಛೆ ಪಡುತ್ತೇನೆ. ಮೊಟ್ಟಮೊದಲ ಬಾರಿಗೆ ಕೇವಲ ಸಂಶೋಧನೆಗೆಂದೇ 10 ಕೋಟಿ ರೂಪಾಯಿಗಳನ್ನು ನಾವು ವಿಶ್ವವಿದ್ಯಾಲಯಗಳಿಗೆ ಕೊಡುತ್ತಿದ್ದೇವೆಂಬುದು ಬಹಳ ಹೆಮ್ಮೆಯ ವಿಷಯ. ಇವತ್ತು ಮಾನ್ಯ ಮುಖ್ಯ

ಮಂತ್ರಿಗಳಿಗೆ ನಾವೆಲ್ಲರೂ ಅಭಿನಂದನೆ ಹೇಳಬೇಕಾಗುತ್ತದೆ. ಎಲ್ಲ ರಾಜ್ಯಗಳಲ್ಲೂ ನೋಡಿದಾಗ ಮೊಟ್ಟಮೊದಲಿಗೆ ವಿದ್ಯುಚ್ಛಕ್ತಿಗೆ ಏನು ವಾಣಿಜ್ಯದರ ಇತ್ತು ಅದನ್ನು ಕೈಗಾರಿಕಾ ದರಕ್ಕೆ ಮಾಡಿದ್ದಾರೆ. ಅದಲ್ಲದೆ ಪ್ರತಿ ಯೂನಿಟ್ ಮೇಲೆ ಒಂದು ರೂಪಾಯಿ ರಿಯಾಯ್ತಿ ಕೊಡುತ್ತೇನೆಂದು ಈಗಾಗಲೇ ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಅದರಿಂದ ನಮ್ಮ ರೈತರಿಗೆ ನಿಜವಾಗಿ ಬಹಳ ಅನುಕೂಲವಾಗುತ್ತದೆ. ಅದೊಂದೇ ಅಲ್ಲ, ನಮ್ಮ ಬಚ್ಚೇಗೌಡರು ಹೇಳಿದಂತೆ ನಾವೇನು ಬೆಳೆಯುತ್ತಿದ್ದೇವೆ ಅದಕ್ಕೆ ಕೇವಲ ಮಾರುಕಟ್ಟೆಯಿಂದ ಆಗುವುದಿಲ್ಲ. ಇದಕ್ಕೆ ಶೀತಲಗೃಹಗಳೂ ಬೇಕು, ಆಮೇಲೆ ಪ್ರೋಸೆಸಿಂಗ್ ಯೂನಿಟ್ ಸಹ ಬೇಕಾಗುತ್ತದೆ. ಪ್ರೋಸೆಸಿಂಗ್ ಯೂನಿಟ್‌ಗಳಿದ್ದರೆ ರೈತರಿಗೆ ಅನುಕೂಲವಾಗುತ್ತದೆಂದು ಏನು ಸಲಹೆ ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಚರ್ಚಿಸಿ ಶೀತಲಗೃಹಗಳಿಗೆ ನಾವೇನು ರಿಯಾಯ್ತಿ ಕೊಟ್ಟಿದ್ದೇವೆ ಅದನ್ನು ಪ್ರೋಸೆಸಿಂಗ್ ಯೂನಿಟ್‌ಗೂ ಎಕ್ಸ್‌ಟೆನ್‌ಶನ್ ಮಾಡುವ ಬಗ್ಗೆ ಮುಂದಿನ ದಿನಗಳಲ್ಲಿ ಆಲೋಚನೆ ಮಾಡುತ್ತೇವೆ. ಇವತ್ತು ನಮ್ಮ ಇಲಾಖೆಗಳು ಮಾನ್ಯ ಮುಖ್ಯಮಂತ್ರಿಗಳವರ ಮಾರ್ಗದರ್ಶನದಲ್ಲಿ ಹೋಗುತ್ತಿವೆ. ಮುಂದಿನ ದಿನಗಳಲ್ಲಿ ಕರ್ನಾಟಕ ತೋಟಗಾರಿಕೆ ಬೆಳೆಗಳ ಪೈಕಿ ದೇಶದಲ್ಲೇ ಮೊಟ್ಟ ಮೊದಲ ರಾಜ್ಯವಾಗುತ್ತದೆಂಬ ಆಶಯ ನಮಗಿದೆ. ರೈತರ ಕಷ್ಟಗಳೇನೇ ಇದ್ದರೂ ಅದಕ್ಕೆ ನಾವು ಸ್ಪಂದಿಸುತ್ತೇವೆ, ಈ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಸದಸ್ಯರು ಸಹಕರಿಸಿ ನಮ್ಮ ಬಿಲ್ಲನ್ನು ಪಾಸು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಯು. ಆರ್. ಸಭಾಪತಿ (ಉಡುಪಿ): ಅಧ್ಯಕ್ಷರೇ ಸಚಿವರು ತಮ್ಮ ಉತ್ತರದಲ್ಲಿ 300ಕ್ಕೂ ಹೆಚ್ಚು ತೋಟಗಾರಿಕಾ ಫಾರ್ಮ್‌ಗಳು ನಿರ್ವಹಣೆಯಿಲ್ಲದೆ, ಲಾಭವಿಲ್ಲದೆ ಇರುವ ಪರಿಸ್ಥಿತಿಯಲ್ಲಿರುವ ಬಗ್ಗೆ, ಹಿಂದೆ ಸದನದಲ್ಲಿ ಚರ್ಚೆಯೂ ಆಗಿತ್ತು ಅದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಂಡಿದೆ? ಈ ಫಾರ್ಮಗಳು ತನ್ನ ನಿರ್ವಹಣೆಯ ಲೆಕ್ಕ ಪತ್ರಗಳನ್ನು ಅನೇಕ ವರ್ಷಗಳಿಂದ ಇಡದೆ ಆಡಿಟ್ ಮಾಡದೇ ಇರುವುದು ಬೆಳಕಿಗೆ ಬಂದಿದ್ದರೂ ಕೂಡ ಇದರ ಬಗ್ಗೆ ನಿರ್ದಿಷ್ಟವಾಗಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಅವರು ದಯವಿಟ್ಟು ತಿಳಿಸಬೇಕು. ಇನ್ನೊಂದು, ತೋಟಗಾರಿಕೆಯಲ್ಲಿ ಆಸಕ್ತಿ ವಹಿಸುವಂತೆ ವಿದ್ಯಾವಂತ ನಿರುದ್ಯೋಗಿಗಳಿಗೆ ಪ್ರೋತ್ಸಾಹ ಕೊಡಲು ಸರ್ಕಾರ ಯಾವ ಕಾರ್ಯಕ್ರಮ ಹಮ್ಮಿಕೊಂಡಿದೆ? ನಿರುದ್ಯೋಗಿಗಳು ತಮ್ಮ ಕಾಲಮೇಲೆ ನಿಲ್ಲುವಂತಹ ಯಾವುದಾದರೂ ಆರ್ಥಿಕ ಕಾರ್ಯಕ್ರಮ ನೀಡಲು ತೋಟಗಾರಿಕೆ ಇಲಾಖೆ ಚಿಂತನೆ ನಡೆಸಿದೆಯೇ ಎನ್ನುವುದನ್ನು ಸ್ಪಷ್ಟೀಕರಿಸಬೇಕು. ಮತ್ತೆ, ತೋಟಗಾರಿಕೆ ಇಲಾಖೆಯ ವಿಷಯ ಸಮಿತಿ ವರದಿಗಳು ಈಗಾಗಲೇ ನಮ್ಮ ಸದನದ ಮುಂದೆ ಬಹಳ ಇವೆ. ಅವುಗಳಲ್ಲಿ ಇರುವ ಅಭಿವೃದ್ಧಿಪರ ಶಿಫಾರಸ್ಸುಗಳನ್ನೇ ಇಂಪ್ಲಿಮೆಂಟ್ ಮಾಡಿದರೆ ಸಾಕಾಗುತ್ತದೆ. ಅವುಗಳಲ್ಲಿನ ಕಾಲಂಶವನ್ನಾದರೂ ಅನುಷ್ಠಾನಕ್ಕೆ ತರುತ್ತಾರೋ? ಇಲ್ಲಿ ನಾವು ಅದನ್ನು ಚರ್ಚೆ ಮಾಡಬೇಕಾಗಿಲ್ಲ. ಅಲ್ಲಿ ಕುಳಿತು ಚರ್ಚಿಸಿ ವರದಿಗಳನ್ನು ಹಿಂದೆಯೇಸಲ್ಲಿಸಿದ್ದೇವೆ. 4 ವರ್ಷಗಳ ಹಿಂದೆ ತೋಟಗಾರಿಕೆ ಇಲಾಖೆಗೆ ಶೀತಲಗೃಹಗಳನ್ನು ಬಳಸಿಕೊಂಡು ಆ ಮೂಲಕ ಇಲ್ಲಿನ ತೋಟಗಾರಿಕೆ ಉತ್ಪತ್ತಿಗಳು ತಮಿಳುನಾಡಿಗೆ ಹೋಗಿ ಅಲ್ಲಿ ಶೀತಲಗೃಹಗಳಲ್ಲಿಟ್ಟು ಅಲ್ಲಿಂದ ಮತ್ತೆ ಇಲ್ಲಿಗೆ ಮಾರಾಟಕ್ಕೆ ತರುವ ಬಗ್ಗೆ ವಿಷಯ ಸಮಿತಿಗಳಲ್ಲಿ ನಾವು ಬೇಕಾದಷ್ಟು ಶಿಫಾರಸ್ಸುಗಳನ್ನು ಮಾಡಿದ್ದೇವೆ. ಅದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಹೇಳಬೇಕೆಂದು ಕೋರುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಈಗಾಗಲೇ ನಾವು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಗಳು ಕೋಲ್ಡ್ ಸ್ಟೋರೇಜ್‌ಗಳಿಗೆ ವಾಣಿಜ್ಯ ದರ ಇದ್ದುದನ್ನು ಕೈಗಾರಿಕಾ ದರಕ್ಕೆ ರಿಯಾಯ್ತಿ ಕೊಡುವುದಲ್ಲದೆ ಪ್ರತಿ

ಯೂನಿಟ್ ಗೂ ಒಂದು ರೂಪಾಯಿ ರಿಯಾಯ್ತಿ ಕೊಡಲಾಗುವುದೆಂದು ಏನು ಘೋಷಣೆ ಮಾಡಿದ್ದಾರೆ. ಇದರಿಂದ ಈಗಾಗಲೇ ನನಗೆ 25 ರಿಂದ 30 ಎಂಟರ್ ಪ್ರೆನ್ಯೂಯರ್ಸ್ ಅರ್ಜಿಗಳನ್ನು ಕೊಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಪ್ರತಿ ಜಿಲ್ಲೆಯಲ್ಲೂ ಸರಾಸರಿ ನೂರು ಶೀತಲಗೃಹಗಳು ನಮ್ಮ ರಾಜ್ಯದಲ್ಲಿ ಬರುತ್ತವೆಂಬ ಆಶಯ ಇದೆ. ಆದಲ್ಲದೆ ತಾವೇನು ಸಲಹೆ ಮಾಡುತ್ತಿದ್ದೀರಿ, ಕೃಷಿ ವಿಶ್ವವಿದ್ಯಾಲಯದಲ್ಲಿ ಬಹಳಷ್ಟು ಅಂಡರ್ ಗ್ರಾಜುಯೇಟ್ಸ್ ತರಬೇತಿ ಪಡೆದವರು ಇದ್ದಾರೆ ಅವರಿಗೆ ಯಾವ ಮೂಲಕವಾದರೂ ಸಹಾಯ ಮಾಡಬೇಕೆಂದು ಮುಂದಿನ ದಿನಗಳಲ್ಲಿ ನಮ್ಮಲ್ಲಿರುವ ಫಾರ್ಮ್ ಗಳಲ್ಲಿ ಅವರಿಗೆ ಬೇಕಾದ ಎಲ್ಲ ವ್ಯವಸ್ಥೆ ಮಾಡಿಕೊಟ್ಟು ಬೆಳೆ ಬೆಳೆಯುವ ಬಗ್ಗೆ ಒಂದು ಯೋಜನೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಅಧ್ಯಕ್ಷರೇ, ನಾನು ಹೆಚ್ಚಿಗೆ ಕೇಳುವುದಿಲ್ಲ. ವಿದ್ಯುತ್ ಬಗ್ಗೆ ಸಚಿವರು ಪ್ರಸ್ತಾಪಿಸಿದರು. ನಾವು ಕಾಫಿ ಬೆಳೆಯುವವರು, ಕಾಫಿ ತೋಟಗಾರಿಕೆಗೆ ಸೇರಿದ್ದೋ ಕೃಷಿಗೆ ಸೇರಿದ್ದೋ ಒಂದೂ ಗೊತ್ತಿಲ್ಲ. ಎಲ್ಲ ಜಿಲ್ಲೆಗಳಲ್ಲಿ ಇರಿಗೇಷನ್ ಪಂಪ್ ಗೆ ಎಚ್ ಪಿಗೆ ತಲಾ 300 ರೂಪಾಯಿ ಚಾರ್ಜ್ ಮಾಡುತ್ತಾರೆ, ಆದರೆ ಹಾಸನ ಜಿಲ್ಲೆಯಲ್ಲಿ 500 ರೂಪಾಯಿ ಚಾರ್ಜ್ ಮಾಡುತ್ತಾರೆ. ಈ ತಾರತಮ್ಯ ಏಕೆ ಎಂದು ಗೊತ್ತಿಲ್ಲ. ನಾವು ಕೇಳಿದರೆ ಅಲ್ಲಿಯ ಅಧಿಕಾರಿಗಳು ಹೇಳುತ್ತಾರೆ. ನಮಗೆ ಆದರ ಬಗ್ಗೆ ಯಾವುದೇ ಸರ್ಕಾರಿ ಆದೇಶ ಬಂದಿಲ್ಲ ಎಂದು ನಾನು ತಿಳಿದ ಮಟ್ಟಿಗೆ ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳಲ್ಲಿ ಕೇವಲ ಒಂದು ಅಥವಾ ಎರಡು ತಿಂಗಳು ಕಾಫಿಗೋಸ್ಕರ ಹೆಚ್ಚು ವಿದ್ಯುತ್ ಬಳಸುವವರು ನಾವು ಆದರೆ ವರ್ಷ ವಿಡೀ ಒಂದು ಎಚ್ ಪಿಗೆ 500 ರೂಪಾಯಿ ಅಂದರೆ ಎಲ್ಲ ತೋಟಗಳಲ್ಲಿ 50 ರಿಂದ 100 ಎಚ್ ಪಿಯ ಒಂದೊಂದು ಮೋಟರನ್ನು ನಾವು ಇಟ್ಟು ಕೊಳ್ಳುತ್ತೇವೆ. ಇಷ್ಟು ಹಣವನ್ನು ಎರಡು ತಿಂಗಳಿಗೋಸ್ಕರ ಕಟ್ಟುತ್ತಲೇ ಬರುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಕೇಳಿ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ವ್ಯತ್ಯಾಸವನ್ನು ಸರಿಪಡಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ತಾವು ಹೇಳಿದಂತೆ ಕಾಫಿ ಕೃಷಿಗೆ ಸೇರಿದ್ದೋ ತೋಟಗಾರಿಕೆಗೆ ಸೇರಿದ್ದೋ ಅಥವಾ ಪ್ಲಾಂಟೇಶನ್ ಕ್ರಾಪ್ ನಲ್ಲಿ ಬರುತ್ತದೋ ಗೊತ್ತಿಲ್ಲ. ಆದರೆ ತಾರತಮ್ಯ ಇದೆಯೆಂದು ಹೇಳಿದ್ದೀರಿ. ರಾಜ್ಯದೊಳಗೆ ಪ್ಲಾಂಟೇಶನ್ ಕ್ರಾಪ್ ಬೆಳೆಯುವ ಇತರೆ ಜಿಲ್ಲೆಗಳಿಗೂ ಹಾಸನ ಜಿಲ್ಲೆಗೂ ತಾರತಮ್ಯ ಇದ್ದಲ್ಲಿ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಈಗ ತಾನೇ ಸಭಾಪತಿಗಳು ತೋಟಗಾರಿಕೆ ಇಲಾಖೆಯ ಫಾರ್ಮ್ ಗಳ ಬಗ್ಗೆ ಪ್ರಸ್ತಾಪಿಸಿದರು. ಸಾವಿರಾರು ಎಕರೆ ಒಳಗೊಂಡ ತೋಟಗಾರಿಕೆ ಫಾರ್ಮ್ ಗಳು ಈಗ ವಿರೂಪವಾಗಿವೆ. ಅವನ್ನು ಪ್ರೊಡಕ್ಟೀವ್ ಮಾಡಲು ಸರ್ಕಾರ ಏನಾದರೂ ಕಾರ್ಯಕ್ರಮ ಹಮ್ಮಿಕೊಂಡಿದೆಯೇ? ಏಕೆಂದರೆ ಅದೆಲ್ಲ ಬಹಳಷ್ಟು ಬೆಲೆ ಬಾಳುವ ಫಲವತ್ತಾದ ಭೂಮಿಯಾಗಿದೆ. ಅದು ಸದುಪಯೋಗವಾಗುವಂತೆ ಸರ್ಕಾರ ಕಾರ್ಯಕ್ರಮ ಹಾಕಿ ಕೊಳ್ಳಬೇಕು ಮತ್ತು ಎಂತಹ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂಬುದನ್ನು ನಮಗೆ ತಿಳಿಸಬೇಕು ಅನೇಕ ಜಿಲ್ಲೆಗಳಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇವೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಕೂಡ ಅನೇಕ ಹುದ್ದೆಗಳು ಖಾಲಿ ಇದ್ದು ಇವತ್ತು ನುಸಿಪೀಡೆಗೆ ಪರಿಣಾಮಕಾರಿ ಚಿಕಿತ್ಸೆ ಮಾಡಲು ಆಗುತ್ತಿಲ್ಲ. ಆ ಖಾಲಿ ಇರತಕ್ಕಂಥ ಅವಶ್ಯಕವಾದಂತಹ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೇ ಎಂದು ನಾನು ಕೇಳಬಯಸುತ್ತೇನೆ. ಅಂತೆಯೇ ಸಂಶೋಧನಾ ವಿಭಾಗವನ್ನು ಪ್ರಾರಂಭ ಮಾಡಿರತಕ್ಕದ್ದು ಸುಮಾರು 10

ಕೋಟಿ ರೂಪಾಯಿ ವೆಚ್ಚದಲ್ಲಿ ಎನ್ನತಕ್ಕದ್ದನ್ನು ಹೇಳಿದ್ದಾರೆ. ಇದು ಕೂಡ ಬಹಳಷ್ಟು ಸ್ವಾಗತಾರ್ಹವಾತಂದಹ ಕಾರ್ಯಕ್ರಮ. ಆದರೆ ಏನು ಪ್ಲಾಂಟ್ ಪ್ರೊಟೆಕ್ಷನ್ ಕಾರ್ಯಕ್ರಮ ಇದೆಯೋ ಅದು ನಿರಂತರವಾಗಿ ಆಗಬೇಕು. ಈಗ ಪ್ರತಿಯೊಂದು ಪದಾರ್ಥವಾದ ಅಡಿಕೆ, ತೆಂಗು,ಕಪ್ಪು ಮೆಣಸು ಈ ಬೆಳೆಗಳು ಕೂಡ ರೋಗದಿಂದ ಮುಕ್ತವಾಗಿರತಕ್ಕದ್ದು ಇಲ್ಲ. ಪ್ರತಿದಿನವೂ ಕೂಡ ಆ ರೈತರ ಒಂದು ಅಳಲನ್ನು ನಾವು ಪತ್ರಿಕೆಗಳ ಮೂಲಕ ಹಾಗೂ ಸ್ವಯಂ ವೇದ್ಯವಾಗಿರತಕ್ಕ ಕಾರಣದಲ್ಲಿ ಈ ಸಸ್ಯ ಸಂರಕ್ಷಣಾ ಕಾರ್ಯಕ್ರಮದಲ್ಲಿ ಇಲಾಖೆಯು ಹೆಚ್ಚಿನ ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾಳೆ ಬಗ್ಗೆ ಮಿನಿಮಮ್ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡಿದ್ದೇವೆಂದು ಹೇಳಿದರು ಆದರೂ ಆ ಸಂಸ್ಕರಣ ಘಟಕಗಳು ಇಲ್ಲದೇ ಇದ್ದರೆ ಏನೂ ಪ್ರಯೋಜನ ಆಗುವುದಿಲ್ಲ. ರೈತನಿಗೆ ಒಂದು ಭರವಸೆ, ನಂಬಿಕೆ ಒಂದು ಬೆಳೆ ಮೇಲೆ ಇಲ್ಲದೇ ಹೋದರೆ ಆ ರೈತ ಬೆಳೆ ಬೆಳೆಯುವುದನ್ನು ಬಿಟ್ಟು ಹೋಗತಕ್ಕಂಥ ಪರಿಸ್ಥಿತಿ ಬಂದಿರಬೇಕಾದರೆ ಆಒಂದು ಕೈಗಾರಿಕಾ ಇಲಾಖೆಯ ಅಡಿಯಲ್ಲಿ ಬಂದರೂ ಕೂಡ ಆ ಸಂಸ್ಕರಣಾ ಘಟಕವನ್ನು ಪುನಃ ಪ್ರಾರಂಭ ಮಾಡತಕ್ಕಂಥ ಮತ್ತು ಇನ್ನೂ ಸಂಸ್ಕರಣೆಗೆ ಹೆಚ್ಚು ಒತ್ತನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇದನ್ನು ಮಾರ್ಕೆಟಿಂಗ್ ಬಗ್ಗೆ, ಬಹಳ ದಿವಸಗಳಿಂದ ಕರ್ನಾಟಕ ಹಾರ್ಟಿಕಲ್ಚರ್ ಫೆಡರೇಷನ್ ಒಂದನ್ನು ನಮ್ಮ ರಾಜ್ಯದಲ್ಲಿ ಪ್ರಾರಂಭ ಮಾಡಿತು. ಅದು ಯಾವ ಹಂತದಲ್ಲಿದೆ ಎನ್ನತಕ್ಕದ್ದು ಗೊತ್ತಾಗುತ್ತಿಲ್ಲ ಈಗ ಮೂರು ವಿಧವಾದಂತಹ ಹಾಪ್‌ಕಾಮ್ಸ್ ಮಾರ್ಕೆಟಿಂಗ್‌ನಲ್ಲಿರತಕ್ಕದ್ದು ಹೀಗೆ ರೈತನ ಹಿತದೃಷ್ಟಿಯಿಂದ ಅಷ್ಟು ಕ್ಷೇಮಕರ ಆಗುವುದಿಲ್ಲ. ಯಾವುದಾದರೂ ಒಂದು ಪರಿಣಾಮಕಾರಿ ಆಗಿ ಆಗಬೇಕು. ಈಗ ನಮ್ಮ ಹಾಲು ಉತ್ಪಾದಕರೂ ಸಹ ಆ ಸಹಕಾರ ಸಂಘ, ಒಂದೇ ಕಾರ್ಯಕ್ರಮ ಮಾತ್ತಿರತಕ್ಕದ್ದು. ಎಲ್ಲಾ ಹಾಲು ಉತ್ಪಾದಕರೂ ಸಹ ಆ ಸಹಕಾರ ಸಂಘಕ್ಕೆ ಹೋಗಿ ತಮ್ಮ ಹಾಲನ್ನು ಕೊಡುತ್ತಿದ್ದಾರೆ. ಅದೇ ರೀತಿ ತೋಟಗಾರಿಕಾ ವಲಯದಲ್ಲಿ ಕೂಡ ಮಾರ್ಕೆಟಿಂಗ್ ಒಂದು ಏಜೆನ್ಸಿಯನ್ನು ಅವರು ಇಡಬೇಕು. ಹಾಪ್‌ಕಾಮ್ಸ್‌ನ್ನು ಬಲಿಷ್ಠ ಮಾಡಿ ಹಾಪ್‌ಕಾಮ್ಸ್ ಮುಂದುವರೆದರೂ ಕೂಡ ಅಷ್ಟೇ ಕ್ಷೇಮಕರವಾಗಿ ಇರುತ್ತದೆ. ಈ ಮಾರ್ಕೆಟಿಂಗ್ ಬಗ್ಗೆ ಅವರು ಏಕೆ ಸಂಸ್ಥೆಯನ್ನು ಮಾಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಅವರನ್ನು ಕೋರುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಉಪಾಧ್ಯಕ್ಷರೆ ಮಾನ್ಯ ಸದಸ್ಯರು ತೋಟಗಾರಿಕೆಯ ಮಾಜಿ ಮಂತ್ರಿಗಳು ಆಗಿದ್ದವರು. ಅವರಿಗೆ ಇದರಲ್ಲಿ ಬಹಳಷ್ಟು ಅನುಭವ ಇದೆ. ಆಗಿಂದಾಗ್ಗೆ ಇವರ ಸಲಹೆಗಳನ್ನು ಕೂಡ ನಾವು ಕೇಳುತ್ತಿದ್ದೇವೆ. ಈಗ ಅವರು ಹೇಳಿದ ಹಾಗೆ ನಮ್ಮ ಫಾರ್ಮ್ಸ್‌ನಲ್ಲಿ ಕೆಳಮಟ್ಟದ ಸ್ಟಾಫ್ ಏನು ಡೈಲಿ ವೇಜಸ್‌ನವರು ಇದ್ದರು, ಅವರುಗಳು ಹತ್ತು ಹದಿನೈದು ವರ್ಷ ಗ್ರಾಫ್ಟಿಂಗ್‌ನಲ್ಲಿ, ಗಾರ್ಡಿಂಗ್‌ನಲ್ಲಿ ಬಹಳ ಎಕ್ಸ್‌ಪರ್ಟ್ ಆಗಿದ್ದರು ಯಾವಾಗ ಸರ್ಕಾರ ಅವರನ್ನು ಪರ್ಮನೆಂಟ್ ಮಾಡಿದ ಫಳಿಗೆಯಲ್ಲೋ ಬೇರೆ ಬೇಕೆ ಇಲಾಖೆಗಳಿಗೆ ಅವರನ್ನು ಅಪಾಯಿಂಟ್‌ಮೆಂಟ್ ಮಾಡಿ- ಬಿಟ್ಟು ಇವತ್ತು ನಮ್ಮ ತೋಟಗಾರಿಕೆಯಲ್ಲಿ ಒಳ್ಳೆಯ ಟೆಕ್ನಿಕಲ್ ಗ್ರೌಂಡ್ ಲೆವೆಲ್ ವರ್ಕರ್ಸ್ ಕೊರತೆ ಇದೆ. ಅದಕ್ಕೆ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಅತಿ ಮುಖ್ಯವಾದಂತಹ ವಿಷಯ ಅದಂರೆ ಇವತ್ತು ಸುಮಾರು 17 ಸಾವಿರ ಎಕರೆ ಸರ್ಕಾರದ ಫಾರ್ಮ್ಸ್ ಇವೆ. ಕೇವಲ ಮೂರ್ನಾಲ್ಕು ಸಾವಿರ, ಐದು ಸಾವಿರ ಎಕರೆ ನಾವು ಉತ್ಪತ್ತಿ ಮಾಡುತ್ತಿದ್ದೇವೆ, ಬೆಳವಣಿಗೆ ಮಾಡುತ್ತಿದೇವೆ. ಉಳಿದವಕ್ಕೆ ಸರ್ಕಾರದವರು ಏನು ಆಲೋಚನೆ ಮಾಡಿಕೊಂಡಿದ್ದಾರೆಂದು ಹೇಳಿ ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಇದೇ ಪ್ರಶ್ನೆಯನ್ನು ಕೂಡಶ್ರೀಮಾನ್ ಬಚ್ಚೇಗೌಡರು ಕೂಡ ತಮ್ಮ ಮಹತ್ವವಾದ ಭಾಷಣದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಹೇಳಬೇಕು

ಎಂದರೆ ಸರ್ಕಾರದವರು ಇದನ್ನು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಏನಾದರೂ ಲೀಸ್ ಕೊಡಬೇಕು ಎಂದು ಹೇಳಿ ಒಂದು ವಿಷಯವನ್ನು ಆಲೋಚನೆ ಮಾಡಿದ್ದಾರೆ, ಎಲ್ಲೆಲ್ಲಿ ಲಾಸ್ ಆಗುತ್ತದೋ, ಲೀಸ್ ಕೊಡುವ ಕಾಲಕ್ಕೆ, ಏನು ಲೀಸ್ ತೆಗೆದು ಕೊಂಡಿರುತ್ತಾನೆ? ಆತ ತೋಟಗಾರಿಕಾ ಬೆಳೆಗಳನ್ನೇ ಬೆಳೆಯಬೇಕು. ರೈತರ ಅನುಕೂಲಕ್ಕೆ ಬೇಕಾಗುವಂತಹ ನರ್ಸರಿಗಳನ್ನೇ ಬೆಳೆಯಬೇಕು ಎಂದು ಈ ಕ್ಲಾಜ್‌ಗಳನ್ನೆಲ್ಲಾ ನೋಡಿಕೊಂಡು ಮುಂದೆ ಯಾವ ರೀತಿ ಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ಹೇಳಿ ಒಂದು ತರಹದ ಸಲಹೆ ಮತ್ತು ಸೂಚನೆ ಇದೆ. ಇನ್ನೊಂದು ಕರ್ನಾಟಕ ಸ್ಟೇಟ್ ಹಾರ್ಟಿಕಲ್ಚರಲ್ ಪ್ಲಾಂಟ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಮಾಡಬೇಕೆಂದು ಇದ್ದೇವೆ. ಈಗ ನಮ್ಮ ರಾಜ್ಯದಲ್ಲಿ ಬಹಳಷ್ಟು ನರ್ಸರಿಗಳ ಕೊರತೆ ಇದೆ. ನನಗೆ ದಿನಾಲೂ ಎಂಎಲ್‌ಎಗಳ ಮೂಲಕ ನನಗೆ ಸಪೋಟಗಿಡಗಳು ಬೇಕು. ಮಾವಿನ ಗಿಡಗಳು ಬೇಕು. ನಿಂಬೆ ಗಿಡಗಳು ಬೇಕು ಎಂದು ಹೇಳಿ ಬಹಳಷ್ಟು ಡಿಮ್ಯಾಂಡ್ ಇದೆ. ಬಜಾರಿನಲ್ಲಿ ಎಲ್ಲೂ ನರ್ಸರಿ ತಳಿ ಸಿಗುತ್ತಿಲ್ಲ. ನಾವು ತೋಟಗಾರಿಕೆಯಲ್ಲಿ ಗುಣಮಟ್ಟದ ನರ್ಸರಿ ತಯಾರು ಮಾಡಬೇಕು ಎಂದರೆ ಈ ಫಾರ್ಮ ಗಳನ್ನು ಉಪಯೋಗಿಸಿದರೆ ಮಾತ್ರ ನಾವು ಆ ಡಿಮ್ಯಾಂಡನ್ನು ಮೀಟ್ ಮಾಡಬಹುದು. ಅದಕ್ಕೋಸ್ಕರ ಇದನ್ನು ಏಜೆನ್ಸಿ ಮಾಡಬೇಕೆಂದು ಒಂದು ಪ್ರಪೋಸಲ್ ಕೂಡ ಇದೆ. ಇನ್ನು ಒಂದೆರಡು, ಮೂರು ತಿಂಗಳಲ್ಲಿ ಇದರ ಬಗ್ಗೆ ಆಲೋಯಚನೆ ಮಾಡುತ್ತೇವೆಂದು ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಈಗಾಗಲೇ ಮಾನ್ಯ ಸಚಿವರು ಆಲೂಗಡ್ಡೆ ಮತ್ತು ಮೆಣಸಿನಕಾಯಿ ತಳಿ ಸಂಶೋಧನಾ ಕೇಂದ್ರದ ಸಲುವಾಗಿ ಹತ್ತು ಕೋಟಿ ರೂಪಾಯಿಯನ್ನು ಎನ್‌ಡಿಡಿಬಿ ಮುಖಾಂತರ ತಂದು ನಾವು ಅದನ್ನೆಲ್ಲಾ ಅಭಿವೃದ್ಧಿ ಪಡಿಸುತ್ತೇವೆ ಎಂದು ಹೇಳಿದರು. ಆದರೆ ಹಾವೇರಿಯ ನಮ್ಮ ಮೆಣಸಿನಕಾಯಿ ತಳಿ ಸಂಶೋಧನಾ ಕೇಂದ್ರಕ್ಕೆ ಎಷ್ಟು ದುಡ್ಡು ಕೊಡುತ್ತೀರಿ? ಯಾವಾಗ ಕೊಡುತ್ತೀರಿ? ಎನ್ನುವುದನ್ನು ಮಾನ್ಯ ಸಚಿವರು ಹೇಳಿದರೆ ಆ ಭಾಗದ ರೈತರಿಗೆ ಏನಾದರೂ ಅನುಕೂಲ ಆಗುತ್ತದೆ. ಆ ಕಡೆಗೆ ಹೆಚ್ಚಿಗೆ ಸಂತೋಷವನ್ನು ಮತ್ತು ಆನಂದವನ್ನು ವ್ಯಕ್ತಪಡಿಸುತ್ತಾರೆಂದು ಹೇಳಿ ನನ್ನ ಆಸೆ. ಇದಕ್ಕೆ ತಾವು ದಯವಿಟ್ಟು ಸ್ಪಂದಿಸಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಉಪಾಧ್ಯಕ್ಷರೆ, ಅದೇ ಹಾವೇರಿಯಲ್ಲಿ ಬ್ಯಾಡಗಿ ಜಾಗದಲ್ಲಿ ನಾನು ಎಲ್ಲಾ ತರಹದ ಯೂನಿವರ್ಸಿಟಿಯ ಪ್ರೊಫೆಸರ್ಸ್ ಅನ್ನು ಎಕ್ಸ್‌ಪರ್ಟ್ಸ್‌ನ್ನು ಕರೆಸಿದ್ದೆ. ಹಾರ್ಟಿಕಲ್ಚರಲ್ ಬೆಳೆ ನಾವೇನು ಬೆಳೆಯುತ್ತೇವೆ, ಅತಿ ಹೆಚ್ಚಾಗಿ ಕಾಟನ್ ಮತ್ತು ಮೆಣಸಿನಕಾಯಿ ಬೆಳೆ ಬೆಳೆಯತಕ್ಕಂಥ ಎಕ್ಸ್‌ಪರ್ಟ್‌ಗಳನ್ನು ಕರೆಸಿ ಬಹಳ ವಿಷಯಗಳನ್ನು ಮಾತನಾಡಿದ್ದೇವೆ. ಆ ಮೀಟಿಂಗ್‌ನಲ್ಲಿ ಸಂಶೋಧನೆಗೆ ಹಣ ಬೇಕು ಎಂದು ಹೇಳಿ ವಿಚಾರಿಸಿದ್ದೆವು, ಅಲ್ಲಿ ಈ ವಿಷಯ ಬಂದಿತ್ತು. ಅದಕ್ಕೆ ನಾವು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇವತ್ತು ಏನು ಸಂಶೋಧನೆ ಮಾಡಿದ್ದಾರೆ? ಇವತ್ತು ಸಂಶೋಧನೆ ಕೇವಲ ಹಾವೇರಿಗೆ ಅಲ್ಲ ಕರ್ನಾಟಕದಲ್ಲಿ ಬೆಳೆಯತಕ್ಕಂಥ ಯಾವುದಾದರೂ ತೋಟಗಾರಿಕೆಗೆ ಮುಖ್ಯವಾದಂತಹ ಬೆಳೆಗಳು ಇವೆ. ಅದನ್ನು ಸಂಶೋಧನೆ ಮಾಡಬೇಕಾಗಿದೆ. ಅತೀ ಹೆಚ್ಚಿನದಾಗಿ ನಮ್ಮ ಬಳ್ಳಾರಿ ಮತ್ತು ಹಾವೇರಿಯಲ್ಲಿ ನಾವು ಮೆಣಸಿನಕಾಯಿ ಬಹಳ ಬೆಳೆಯುತ್ತಿದ್ದೇವೆ. ಮೆಣಸಿನಕಾಯಿಯಿಂದ ಬಹಳಷ್ಟು ಲಾಸ್ ಆಗಿದೆ. ಲಾಸ್ ಆಗಿರುವುದು ಎಲ್ಲರಿಗೂ ಗೊತ್ತಿದೆ. ಒಳ್ಳೆಯ ಗುಣಮಟ್ಟದ ಬೀಜಗಳು ಇಲ್ಲದೇ ಇರುವುದಕ್ಕಾಗಿ ಲಾಸ್ ಆಗಿದೆ. ಇವತ್ತು ಮೆಣಸಿನಕಾಯಿ ಬಗ್ಗೆ ಮಾತನಾಡುವ ಕಾಲಕ್ಕೆ ನಮ್ಮ ರಾಜ್ಯದಲ್ಲಿ ವ್ಯವಸ್ಥಿತವಾದಂತಹ ಬ್ಯಾಡಗಿ ಮೆಣಸಿನಕಾಯಿ ಗುಂಟೂರು ಮೆಣಸಿನ ಕಾಯಿಯನ್ನು ಇವತ್ತು ಬೆಳೆಯುತ್ತಿದ್ದಾರೆ. ಇವತ್ತು ಬ್ಯಾಡಗಿ ಬೆಳೆಯನ್ನು ಹೆಚ್ಚಾಗಿ ಬೆಳೆಸುತ್ತಲೇ ಇಲ್ಲ. ಏಕೆಂದರೆ ಕ್ವಾಲಿಟಿ ಸರಿ ಇಲ್ಲ ಎಂದು ಬೆಳೆಸುತ್ತಿಲ್ಲ, ಅದಕ್ಕೆ ನಾವು ಇದನ್ನೆಲ್ಲಾ ಅರಿತುಕೊಂಡು ಮುಂದೆ ಹೆಚ್ಚಿನ ಮಹತ್ವವನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ: ಈಗ ಮೆಣಸಿನಕಾಯಿ ತಳಿ ಸಂಶೋಧನೆ ಬಗ್ಗೆ ಸಾಕಷ್ಟು ಸಭೆ, ಸಮಾರಂಭಗಳು ಆಗಿವೆ. ಈಗಾಗಲೇ ನಾವು ಅಗ್ರಿ ಕಲ್ಚರಲ್ ಡಿಪಾರ್ಟ್‌ಮೆಂಟಿನಿಂದ 90 ಎಕರೆ ಜಮೀನು ಕೊಟ್ಟಿದ್ದೇವೆ. ಅದನ್ನು ಯೂನಿವರ್ಸಿಟಿಯವರು ಈಗಾಗಲೇ ಹಸ್ತಾಂತರ ಮಾಡಿಕೊಂಡಿದ್ದಾರೆ. ದುಡ್ಡು ಇಲ್ಲದ ಕಾರಣ ಕಾರ್ಯ ಸ್ಥಗಿತಗೊಂಡಿದೆ. ದಯವಿಟ್ಟು ಅದಕ್ಕೆ ಎಷ್ಟು ದುಡ್ಡು ಕೊಡುತ್ತಾರೆಂದು ಮಾನ್ಯ ಸಚಿವರು ಹೇಳಿದರೆ ಬಹಳ ಒಳ್ಳೆಯದು. ಯಾವಾಗ ಕೊಡುತ್ತಾರೆ ಎಷ್ಟು ಕೊಡುತ್ತಾರೆಂದು ಹೇಳಿದರೆ ಒಳ್ಳೆಯದು.

ಶ್ರೀ ಅಲ್ಲಂ ವೀರಭದ್ರಪ್ಪ: ನಾವು ಇನ್ನೂ ಎನ್ ಡಿಡಿಬಿಗೆ ಅಪ್ಲಿಕೇಶನ್ ಹಾಕಿದ್ದೇವೆ. ಆದರೆ ನಾವು 150 ಕೋಟಿ ರೂಪಾಯಿ ಕೇಳಿದ್ದೇವೆ. ಹತ್ತು ಕೋಟಿ ರೂಪಾಯಿ ನಾವು ಸಂಶೋಧನೆಗೆಂದು ಹೇಳಿದ್ದೇವೆ. ಆ ಹಣ ಬಂದ ಫಳಿಗೆಯಲ್ಲೇ ಆಲೋಕೇಶನ್ ಪ್ರಕಾರ ನಾವು ಮಾಡುತ್ತೇವೆ.

ಶ್ರೀ ಡಿ.ಜಿ. ಶಾಂತನಗೌಡ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ತಾಳೆ ಬೆಳೆ ಬಗ್ಗೆ ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಯಲ್ಲಿಯ ಕಾರೇಹಳ್ಳಿಯಲ್ಲಿರತಕ್ಕಂಥ ಕಂಪನಿ ಈಗ ಕಳೆದ ಆರು ತಿಂಗಳಿಂದ ನಿಂತು ಹೋಗಿದೆ. ರೈತರಿಗೆ 40 ಲಕ್ಷ ರೂಪಾಯಿ ಬಾಕಿ ಕೊಡುವುದು ಇದೆ. ನಮ್ಮ ಬಾಕಿ ಯಾವಾಗ ಕೊಡಿಸುತ್ತೀರಿ? ನಮ್ಮ ಹಣ್ಣು ತೆಗೆದು ಕೊಳ್ಳುತ್ತೀರೋ ಇಲ್ಲವೋ? ಫ್ಯಾಕ್ಟರಿ ಪ್ರಾರಂಭ ಮಾಡಿಸುತ್ತೀರಾ ಎನ್ನುವ ಬಗ್ಗೆ ಸವಿಸ್ತಾರವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಉಪಾಧ್ಯಕ್ಷರೆ, ಕಳೆದ ವರ್ಷ ಸರ್ಕಾರ 50 ಲಕ್ಷ ರೂಪಾಯಿ ಶಿವಮೊಗ್ಗ ಜಿಲ್ಲೆಯಲ್ಲಿ ಬೆಳೆಯತಕ್ಕಂಥಹ ತಾಳೆ ಗಿಡದ ಫ್ಯಾಕ್ಟರಿ ಮತ್ತು ಸಂಘಕ್ಕೆ ಬಿಡುಗಡೆ ಮಾಡಿತ್ತು. ಆ ಫ್ಯಾಕ್ಟರಿ ಮಾಲೀಕ ಇವತ್ತು ಓಡಿ ಹೋಗಿ ಬಿಟ್ಟಿದ್ದಾನೆ. ಅಲ್ಲಿ ಬೆಳೆಯತಕ್ಕಂಥ ತಾಳೆ ಬೆಳೆಯನ್ನು ಯಾರೂ ಕೊಂಡು ಕೊಳ್ಳುವವರು ಇದ್ದಿಲ್ಲ. ನಮ್ಮ ಸರ್ಕಾರ ಬಂದಮೇಲೆ ನಾವು ಇವತ್ತು ಬೇರೆ ವ್ಯವಸ್ಥೆ ಮಾಡಿದ್ದೇವೆ. ಅಲ್ಲಿ ರೈತರು ಬೆಳೆಯತಕ್ಕಂಥ ತಾಳೆ ಹಣ್ಣಿಗೆ ಇವತ್ತು ಆಲ್ಪರ್‌ನೇಟ್ ಅಂತೂ ನಾವು ಮಾಡಿದ್ದೇವೆ. ಈ ಬಾಕಿ ಇವತ್ತಿನದು ಅಲ್ಲ. ಬಹಳ ದಿವಸಗಳಿಂದ ಬಂದಿರತಕ್ಕಂಥ ಬಾಕಿ. ಅದಕ್ಕೆ ಇವತ್ತು 20 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಿ ಅಗತ್ಯವಾಗಿ ಏನು ರೈತರಿಗೆ ಹಣ ಬರುವುದಿದೆ, ಅದರ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಜಿ. ಶಾಂತನಗೌಡ: ಮಾನ್ಯ ಉಪಾಧ್ಯಕ್ಷರೆ, ಬರುವ ಬಾಕಿ 45 ಲಕ್ಷ ರೂಪಾಯಿಗಳು ಇದೆ. ಮಾನ್ಯ ಸಚಿವರು 20 ಲಕ್ಷ ರೂಪಾಯಿಗಳ ವ್ಯವಸ್ಥೆ ಮಾಡಿದ್ದೇವೆಂದು ಹೇಳುತ್ತಾರೆ. ಉಳಿದ 25 ರೂಪಾಯಿಗಳಿಗೆ ಏನು ಪರ್ಯಾಯ ವ್ಯವಸ್ಥೆ ಮಾಡುತ್ತಾರೆ?

ಶ್ರೀ ಅಲ್ಲಂ ವೀರಭದ್ರಪ್ಪ: ಮುಂದಿನ ದಿನಗಳಲ್ಲಿ ಅದರ ಬಗ್ಗೆ ಆಲೋಚನೆ ಮಾಡಿ ಡಿಸ್ಟ್ರಿಕ್ಟ್ ಮಿನಿಸ್ಟರ್ ಹತ್ತಿರ ಕುಳಿತುಕೊಂಡು ಅದರ ಬಗ್ಗೆ ಪರಿಹಾರ ಮಾಡುತ್ತೇವೆ.

ಶ್ರೀ ಡಿ.ಜಿ. ಶಾಂತನಗೌಡ: ಹಣ ಕೊಡುತ್ತೀರಾ?

ಶ್ರೀ ಅಲ್ಲಂ ವೀರಭದ್ರಪ್ಪ: ಹಣ ಕೊಡಿಸಿಕೊಡುತ್ತೇವೆ. ಮಾನ್ಯ ಆತ್ಮಾನಂದ ಅವರು ಒಂದು ಪ್ರಶ್ನೆಯನ್ನು ಕೇಳಿದ್ದರು. ಇವತ್ತು ಹಾಪ್‌ಕಾಮ್ಸ್‌ನ್ನು ಪ್ರತಿ ಜಿಲ್ಲೆಗಳಲ್ಲಿ ವಿಸ್ತರಣೆ ಮಾಡಬೇಕೆಂಬ

ಉದ್ದೇಶವಿದೆ. ಆದರೆ ಮೊನ್ನೆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇದು ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರಕ್ಕೆ ಮಾತ್ರ ಸೀಮಿತವಾಗಿದೆ ಎಂದು ಹೇಳಿ ಜನರಲ್ ರೆಸಲ್ಯೂಷನ್ ಮಾಡಿದ್ದಾರೆ. ಆಮೇಲೆ ಕರ್ನಾಟಕ ಹಾರ್ಟಿಕಲ್ಚರಲ್ ಫೆಡರೇಷನ್‌ನ ಒಂದು ಸಂಸ್ಥೆ ಇದೆ. ಅದರ ಮೂಲಕ ಕೂಡ ಇಂತಹ ವ್ಯವಹಾರವನ್ನು ಮಾಡಬೇಕೆಂಬ ಉದ್ದೇಶ ಮೊದಲಿಗೆ ಇತ್ತು. ಒಟ್ಟಾರೆ ಹಾಪ್‌ಕಾಮ್ಸ್ ಮತ್ತು ಕರ್ನಾಟಕ ಹಾರ್ಟಿಕಲ್ಚರಲ್ ಫೆಡರೇಷನ್ ಅಥವಾ ಸೊಸೈಟಿ ಇದೆ. ಈಗಾಗಲೇ ನಮ್ಮ ಸೆಕ್ರೆಟರಿಯವರು ಇವತ್ತು ಸಾಯಂಕಾಲ ಮೀಟಿಂಗ್ ಕರೆದಿದ್ದಾರೆ. ಇದರ ಬಗ್ಗೆ ಕುಳಿತುಕೊಂಡು ಆ ಅಫಿಷಿಯಲ್ ಲೆವೆಲ್ ಮೀಟ್ ಆದ ಮೇಲೆ ಇದಕ್ಕೆ ಯಾವ ರೀತಿ ರೂಪುರೇಷೆ ಕೊಡಬೇಕೆಂಬ ಬಗ್ಗೆ ಮುಂದಿನ ದಿನಗಳಲ್ಲಿ ಸರ್ಕಾರ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ.

ಶ್ರೀ ಡಿ.ಜಿ. ಶಾಂತನಗೌಡ : ಈಗ ನಮ್ಮ ಕಂಪನಿಯನ್ನು ಪ್ರಾರಂಭ ಮಾಡಿಸುತ್ತೀರೋ ಇಲ್ಲವೇ? ಮುಂದೆ ರೈತರು ಏನು ಮಾಡಬೇಕು? ನಮ್ಮನ್ನು ಎಲ್ಲಿಗೆ ಕಳುಹಿಸುತ್ತೀರಿ? ಬೆಳೆ ಇಟ್ಟುಕೊಳ್ಳಬೇಕೇ ಅಥವಾ ಕಿತ್ತು ಹಾಕಬೇಕೇ?

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಉಪಾಧ್ಯಕ್ಷರೆ ಈಗಾಗಲೇ ಮಾನ್ಯ ಆತ್ಮಾನಂದರವರು ಇಂಥ ಕಾರ್ಖಾನೆಗಳು ಬಹಳಷ್ಟು ಮುಂದೆ ಬರಬೇಕು, ರೈತರಿಗೆ ಅಮೂಲಕ ಅನುಕೂಲವಾಗಬೇಕು ಎಂಬ ವಿಚಾರದಲ್ಲಿ ಹೇಳಿದ್ದಾರೆ. ಈಗಾಗಲೇ ಹರಿಹರದಲ್ಲಿ ಇಂಥ ಎರಡು ಕಾರ್ಖಾನೆಗಳನ್ನು ಹಾಕಬೇಕು ಎಂದು ಅರ್ಜಿಗಳು ಬಂದಿದೆ. ಆದ್ದರಿಂದ ರೈತರು ಬೆಳೆಯುವ ತಾಳೆ ಬೆಳೆ ಎನಿದೆ ಹೊರ ರಾಜ್ಯಕ್ಕಾದರೂ ಕಳುಹಿಸಿಕೊಡುತ್ತೇವೆ ಅಥವಾ ಇನ್ನು ಒಂದು ತಿಂಗಳಿನಲ್ಲಿ ಹೊಸ ಕಾರ್ಖಾನೆ ತೆರೆಯುವ ಬಗ್ಗೆ ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರ, ಮಾನ್ಯ ತೋಟಗಾರಿಕಾ ಸಚಿವರಲ್ಲಿ ಕೆಲವು ಕ್ಲಾರಿಫಿಕೇಷನ್‌ಗಳನ್ನು ಕೇಳಬಯಸುತ್ತೇನೆ. ಇಡೀ ಕರ್ನಾಟಕದ ಇಪ್ಪತ್ತೈಂಟು ಜಿಲ್ಲೆಗಳಿಗೂ ಹಾಪ್‌ಕಾಮ್ಸ್‌ನ್ನು ವಿಸ್ತರಿಸುತ್ತೇನೆಂದು ಅವರು ಹೇಳುತ್ತಿದ್ದಾರೆ. ತೋಟಗಾರಿಕೆ, ರೇಷ್ಮೆ, ವ್ಯವಸಾಯ ಇಲಾಖೆ ಈ ಮೂರು ಇಲಾಖೆಗಳು ಸಿಸ್ಟರ್ಸ್ ಡಿಪಾರ್ಟ್‌ಮೆಂಟ್ ಇದ್ದಂತೆ. ಸಮಸ್ಯೆಗಳು ಎಲ್ಲಾ ಒಂದೇ ರೀತಿ. ಅಕ್ಕ ತಂಗಿಯರಿಗೆ ಇರುವ ಸಮಸ್ಯೆಗಳು ಈ ಮೂರಕ್ಕೂ ಇದೆ. ಹೇಗೆ ಎಂದರೆ, ಇಲ್ಲಿ ಪ್ರೊಡಕ್ಷನ್ ಮಾಡುವವರು ಒಬ್ಬರು, ಮಾರ್ಕೆಟಿಂಗ್ ಮಾಡುವವರು ಒಬ್ಬರು, ಮ್ಯಾನೇಜ್‌ಮೆಂಟ್ ಮಾಡುವವರು ಒಬ್ಬರು, ವಿಭಿನ್ನವಾದ ಕೈಯಲ್ಲಿ ವಿಭಿನ್ನವಾದ ಏಜೆನ್ಸಿ ಕೈಯಲ್ಲಿ ಸಿಕ್ಕಿ ನರಳುತ್ತಿರುವಂಥ ಈ ಮೂರು ಇಲಾಖೆಗಳಲ್ಲಿ ನಮ್ಮ ತೋಟಗಾರಿಕೆ ಇಲಾಖೆ ಸಹ ಒಂದು. ಹಾಪ್‌ಕಾಮ್ಸ್ ಹುಟ್ಟಿರುವ ಬಗ್ಗೆ ಪರಿಶೀಲನೆ ಮಾಡಿದರೆ ಅದರ ಫೌಂಡರ್ ಮೆಂಬರ್ ಪೈಕಿ ನಾನು ಸಹಾ ಒಬ್ಬ, ಅದರ ಶೇರನ್ನು ವಸೂಲಿ ಮಾಡಿ ಅದನ್ನು ಪ್ರಾರಂಭ ಮಾಡಲು ಬಹಳ ಪ್ರಯತ್ನ ಪಟ್ಟಿರುವೆ. ಡಾ: ಮರಿಗೌಡರನ್ನು ಈ ಸಂದರ್ಭದಲ್ಲಿ ಬಹಳ ನೆನಪಿಸಿ ಕೊಳ್ಳುತ್ತೇನೆ. ಬಹಳ ಕಷ್ಟಪಟ್ಟು ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ರೈತರಿಗೆ ಒಳ್ಳೆಯ ಬೆಲೆಯನ್ನು ಕೊಡಬೇಕೆಂದು ಹಾಪ್‌ಕಾಮ್ಸ್‌ನ್ನು ಸ್ಥಾಪನೆ ಮಾಡಿದರು. ಆದರೆ ದುರಾದೃಷ್ಟವಶಾತ್ ಕಳೆದ ಇಪ್ಪತ್ತು ವರ್ಷಗಳಿಂದ ಹಾಪ್‌ಕಾಮ್ಸ್‌ನಲ್ಲಿರುವ ನಿರ್ದೇಶಕರುಗಳು ಯಾರು ಎಂಬುದನ್ನು ಪಟ್ಟಿ ತರಿಸಿ ನೋಡಿದರೆ ಅದರಲ್ಲಿ ಬೆಂಗಳೂರಿನವರು ಮತ್ತು ಕೋಲಾರದವರು ಇದ್ದಾರೆ. ಇದು ಇಡೀ ಕರ್ನಾಟಕದ ರೆಪ್ರಸೆನ್ ಟೇಟೀವ್ ಆಗುತ್ತದೋ ಅಥವಾ ಕೇವಲ ಕೋಲಾರ, ಬೆಂಗಳೂರಿನವರು ಮಾತ್ರ ರೆಪ್ರಸೆನೆಟೇಟೀವ್ಸ್ ಆಗುತ್ತಾರೋ ಎಂದು ಪ್ರಶ್ನೆ ಮಾಡಬೇಕಾಗುತ್ತದೆ.

ಎರಡನೆಯದಾಗಿ ಹಾಪ್‌ಕಾಮ್ಸ್‌ನಲ್ಲಿ ತರಕಾರಿಯ ಕೊರತೆ ಬಂದರೆ ಕೆ.ಆರ್. ಮಾರುಕಟ್ಟೆಯಲ್ಲಿರುವ ತರಕಾರಿಯನ್ನೇ ತಂದು ಮಾರುವ ವ್ಯವಸ್ಥೆ ಇದೆ. ಮೂರನೆಯದಾಗಿ ಅಲ್ಲಿ ಕೋಟಿಗಟ್ಟಲೆ ನಷ್ಟವಾಗಿದೆ ಎಂಬುದು ಸಚಿವರಿಗೂ ಗೊತ್ತಿದೆ. ಅದರ ಬಗ್ಗೆ ಯಾರು ಸಹ ಕ್ರಮ ತೆಗೆದುಕೊಳ್ಳದಿರುವುದು ದುರಾದೃಷ್ಟಕರ. ಆದ್ದರಿಂದ ಹಾಪ್‌ಕಾಮ್ಸ್‌ರೂಲ್ ಏನಿದೆ. ಚುನಾವಣೆಯ ರೂಲ್ಸ್ ಏನಿದೆ ಅದನ್ನು ಮೊದಲು ತಿದ್ದುಪಡಿ ಮಾಡಬೇಕು. ಪ್ರತಿ ಜಿಲ್ಲೆಯಲ್ಲಿ ಅಲ್ಲೇ ಚುನಾವಣೆ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕು. ಗುಲ್ಬರ್ಗಾದವರು ಇಲ್ಲಿ ಬಂದು ಓಟ್ ಮಾಡಲು ಯಾರು ಸಿದ್ದರಾಗಿಲ್ಲ. ಮೈಸೂರಿನವರನ್ನು ಇಲ್ಲಿ ಕರೆದುಕೊಂಡುಬಂದು ಓಟ್ ಮಾಡಿಸಲು ಸಾಧ್ಯವಿಲ್ಲದ ಮಾತು. ಸೆನೆಟ್, ಸಿಂಡಿಕೇಟ್‌ಗಳಲ್ಲಿ ಚುನಾವಣೆ ಪದ್ಧತಿ ಹೇಗಿದೆ ಆ ರೀತಿ ಆಯಾಯ ಜಿಲ್ಲೆಯಲ್ಲಿ ಚುನಾವಣಾ ಅಧಿಕಾರಿಯನ್ನು ಇಟ್ಟು ಆಯಾಯ ಜಿಲ್ಲೆಯ ಪ್ರತಿನಿಧಿಗಳನ್ನು ಅಲ್ಲೇ ಚುನಾಯಿಸುವ ಪದ್ಧತಿಯನ್ನು ಜಾರಿಗೆ ತಂದಾಗ ಹಾಪ್‌ಕಾಮ್ಸ್‌ಗೆ ಇಡೀ ಕರ್ನಾಟಕದ ಜನ ಪಾಲುಗೊಳ್ಳುವಿಕೆಯ ಪದ್ಧತಿ ಬರುತ್ತದೆ. ಅಲ್ಲಿಯವರೆಗೆ ಇದು ಕೇವಲ ಕೆಲವೇ ಜನರ ಹಿಡಿತದಲ್ಲಿ ಇರುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ. ದಯಮಾಡಿ ಆ ರೂಲನ್ನು ಕಡ್ಡಾಯವಾಗಿ ತಿದ್ದುಪಡಿ ಮಾಡಲೇ ಬೇಕೆಂದು ಮಾನ್ಯ ತೋಟಗಾರಿಕೆ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಲ್ಲದಿದ್ದರೆ ಕೆಲವೇ ಜನರಲ್ಲೇನು ಕಪಿಮುಷ್ಟಿತನದಲ್ಲಿ ಸಿಕ್ಕಿದೆ ಅದರಿಂದ ಬಿಡುಗಡೆಯಾಗಲೂ ಸಾಧ್ಯವಿಲ್ಲ. ಇವರ ಇಲಾಖೆಯ ಅಡಿಯಲ್ಲಿ ಸುಮಾರು 350 ಫಾರಂಗಳು ಇವೆ. ಈ ಫಾರಂಗಳ ಎಕನಾಮಿಕ್ಸ್‌ನ್ನು ಅಧ್ಯಾಯನ ಮಾಡಿದರೆ 350 ಫಾರಂಗಳು ಸಹ ನಷ್ಟದಲ್ಲಿವೆ. ಹೆಚ್ಚು ಕಮ್ಮಿ ಅವುಗಳೆಲ್ಲವು ಪ್ರೊಡಕ್ಟೀವ್ ಸ್ಪೇಜ್‌ನಲ್ಲಿ ಇಲ್ಲ. ಆದ್ದರಿಂದ ದಯಮಾಡಿ ಇವುಗಳನ್ನು ಖಾಸಗೀಕರಣ ಮಾಡಿ ಇಲ್ಲದಿದ್ದರೆ 350ನ್ನು ಸಹ ತೋಟಗಾರಿಕಾ ತರಬೇತಿ ಶಾಲೆಯನ್ನಾಗಿ ಪರಿವರ್ತನೆ ಮಾಡಿ ಯಾವ ಮಕ್ಕಳು ಕೆಲಸವಿಲ್ಲದೆ ಒದ್ದಾಡುತ್ತಿದ್ದಾರೆ ಅವರಿಗೆ ತೋಟಗಾರಿಕೆಯ ತರಬೇತಿ ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳುವುದು ಸೂಕ್ತವೆಂದು ಅವರ ಗಮನಕ್ಕೆ ತರಬಯಸುತ್ತೇನೆ. ಮೂರನೆಯದಾಗಿ, ಮಾರ್ಕೆ ಟಿಂಗ್ ಪ್ರಾಬ್ಲಮ್. ಇದನ್ನು ಬಗೆಹರಿಸಲು ಹಲವಾರು ಉಪಾಯಗಳು ಇವೆ. ಇದರ ಬಗ್ಗೆ ಕೃಷಿ ಮತ್ತು ರೇಷ್ಮೆ ಸಚಿವರಗಳು ಗಮನಹರಿಸಬೇಕಾಗುತ್ತದೆ. ಅಖಿಲ ಭಾರತದ ಮಟ್ಟದಲ್ಲಿ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಲ್ಲಿ ತರಕಾರಿಗಳು ಮಾರಾಟವಾಗುವ ಸ್ಥಿತಿ ಇದೆ. ಯಾವ ರಾಜ್ಯದಲ್ಲಿ ಯಾವ ಬೆಲೆಯಲ್ಲಿ ತರಕಾರಿ ಮಾರಾಟವಾಗುತ್ತಿದೆ ಎಂಬ ಅಂಕಿಅಂಶವನ್ನು ಪಡೆದು ಕರ್ನಾಟಕದಿಂದ ಬೇರೆ ರಾಜ್ಯಗಳಿಗೆ ತರಕಾರಿಯನ್ನು ರವಾನೆ ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕು. ಮಿನಿಸ್ಟ್ರಿ ಆಫ್ ಅಗ್ರಿಕಲ್ಚರ್‌ನಲ್ಲಿ ಅಪೆಡಾ ಎಂದು ಇದೆ. ಅದನ್ನು ಅತ್ಯಂತ ಹೆಟ್ಟಾಗಿ ನಮ್ಮ ತೋಟಗಾರಿಕಾ ಸಚಿವರು ಬಳಸಿಕೊಳ್ಳಬೇಕು. ವಿದೇಶಗಳಿಗೆ ತರಕಾರಿಯನ್ನು ರವಾನೆ ಮಾಡುವಂಥ ಬಹಳಷ್ಟು ಅವಕಾಶಗಳು ಅದರಲ್ಲಿ ಇದೆ. ಆ ಏಜೆನ್ಸಿಯನ್ನು ನಮ್ಮ ಕರ್ನಾಟಕದಲ್ಲಿ ಸಹ ತರೆದಿದ್ದಾರೆ ಎಂಬ ವಿಚಾರ ತಿಳಿದಿಬಂದಿದೆ. ಆದರೆ ಉತ್ತರ ಭಾರತದವರು ಅದನ್ನು ಡಾಮಿನೇಟ್ ಮಾಡಿ ಕೊಂಡಿದ್ದಾರೆ. ಇದರ ಬಗ್ಗೆ ಕೃಷಿ, ತೋಟಗಾರಿಕೆ, ರೇಷ್ಮೆ ಸಚಿವರುಗಳು ದಯಮಾಡಿ ಗಮನಹರಿಸಬೇಕು. ಈ ಏಜೆನ್ಸಿಯನ್ನು ನಾವು ಚೆನ್ನಾಗಿ ಉಪಯೋಗಿಸಿಕೊಳ್ಳಲೇ ಬೇಕು. ಯಥೇಚ್ಛವಾಗಿ ಹರಿಯಾಣ, ಪಂಜಾಬ್ ಮತ್ತು ಉತ್ತರ ಪ್ರದೇಶದ ಪಶ್ಚಿಮ ಭಾಗದವರು ಇದನ್ನು ಬಹಳ ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ವಿದೇಶಗಳಿಗೆ ತರಕಾರಿಗಳನ್ನು ರಫ್ತು ಮಾಡುವ ಅವಕಾಶಗಳು ಇದರಲ್ಲಿ ಬಹಳ ಇದೆ. ದಯಮಾಡಿ ಮಾನ್ಯ ತೋಟಗಾರಿಕಾ ಮಂತ್ರಿಗಳು ಇದನ್ನು ಜಾರಿಗೆ ತರಬೇಕು. ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ

ವಿವಿಧ ರೀತಿಯ ತರಕಾರಿ ಬೆಳೆಗಳು ಇದೆ. ದಯಮಾಡಿ ಈ ಮಾಹಿತಿಯು ಎಲ್ಲಾ ಜಿಲ್ಲೆಗಳಿಗೆ ತಲುಪುವ ಬಗ್ಗೆ ಅವರು ಗಮನಹರಿಸಬೇಕು. ನಾನು ತೋಟಗಾರಿಕಾ ಇಲಾಖೆಯನ್ನು ಬಹಳ ಹತ್ತಿರದಿಂದ ನೋಡಿದವನು ಮತ್ತು ಅದರ ಅನುಕೂಲತೆಯನ್ನು ಪಡೆದುಕೊಂಡಿರುವವನು. ಈ ಇಲಾಖೆಯಲ್ಲಿ ಬಹಳಷ್ಟು ಜನರಿಗೆ ಬಡ್ತಿಯನ್ನು ಯಥೇಚ್ಛವಾಗಿ ಕೊಟ್ಟಿದ್ದಾರೆ. ಆದರೆ ಬಡ್ತಿಯನ್ನು ಕೊಡುವುದರಿಂದ ಫಲಿತಾಂಶವೇನು ಎಂಬುದಕ್ಕೆ ನನಗೆ ಇನ್ನು ಸಹ ಉತ್ತರ ಸಿಗುತ್ತಿಲ್ಲ. ಆದ್ದರಿಂದ ಆ್ಯನ್‌ಸರಬಲಿಟಿ, ಅಕೌಂಟಬಲಿಟಿ, ರೆಸ್ಪಾನ್ಸಿಬಲಿಟಿ ಈ ಮೂರು ಎಲಿಮೆಂಟ್ಸ್‌ನ್ನು ದಯಮಾಡಿ ಪ್ರತಿ ಹಂತದಲ್ಲಿ ಜಾರಿಗೆ ತರುವ ಪದ್ಧತಿಯನ್ನು ತೆಗೆದುಕೊಂಡುಬರಬೇಕು. ಕೇವಲ ಬಡ್ತಿಯನ್ನು ಕೊಡುವುದರಿಂದ ಈ ಎಫೀಶಿಯನ್ಸಿ ಬರುವುದಿಲ್ಲವೆಂಬ ಮಾತನ್ನು ಮಾನ್ಯ ತೋಟಗಾರಿಕಾ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಪ್‌ಕಾಮ್ಸ್ ಚುನಾವಣೆ ಮಾಡುವ ಸಮಯದಲ್ಲಿ ಜಿಲ್ಲಾವಾರು ಚುನಾವಣೆ ಮಾಡಿದರೆ ನಮಗೆ ಅನುಕೂಲವಾಗುತ್ತದೆ, ಆದ್ದರಿಂದ ಇರುವ ರೂಲ್‌ನ್ನು ತಿದ್ದುಪಡಿ ಮಾಡಬೇಕೆಂದು ಕೇಳಿದ್ದಾರೆ. ಇವತ್ತು ಹಾಪ್‌ಕಾಮ್ಸ್ ತೋಟಗಾರಿಕೆ ಇಲಾಖೆಯಿಂದ ಸಲಹೆಯನ್ನು ಕೊಡತಕ್ಕ ಸಂಘವಾಗಿದೆ. ಹಾಪ್‌ಕಾಮ್ಸ್ is entirely withtin the Department of Co-operation. ಸಹಕಾರಿ ಸಚಿವರಿಗೆ ಸಹ ಅದು ಸಂಬಂಧಪಡುತ್ತದೆ, ಸಹಕಾರಿ ಇಲಾಖೆಯಲ್ಲ ಸಹ ಅದು ಒಳಪಟ್ಟಿದೆ. ಆದರೆ ನಾವು ಅದನ್ನು ಉತ್ತಮಮಟ್ಟದಲ್ಲಿ ರೈತರು ಬೆಳೆದ ತೋಟಗಾರಿಕೆ ಬೆಳೆಗಳಿಗೆ ಒಳ್ಳೆಯ ಬೆಲೆ ಸಿಗಬೇಕೆಂದು ನಮ್ಮ ಪಾತ್ರವನ್ನು ವಹಿಸುತ್ತಿದ್ದೇವೆ. ಅದೇ ರೀತಿ ಗುಣಮಟ್ಟದ ಹಣ್ಣು ಹಂಪಲು ಹಾಪ್‌ಕಾಮ್ಸ್ ನಲ್ಲಿ ಸಿಗಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಕಳೆದ ಹದಿನೈದು ದಿವಸದಿಂದ ನಾವು ಹೊಸ ಯೋಜನೆಯನ್ನು ಹಾಪ್‌ಕಾಮ್ಸ್ ನಲ್ಲಿ ಹಮ್ಮಿಕೊಂಡಿದ್ದೇವೆ. ಕೆಲವು ಸಲ ಮೊದಲ ದರ್ಜೆಯದ್ದು ಬೇಕು, ಎರಡು ಮತ್ತು ಮೂರನೆ ದರ್ಜೆಯದ್ದು ಬೇಡ ಎಂದು ಹೇಳಿದಾಗ ರೈತರಿಗೆ ಅವರ ಮಾಲನ್ನು ಬೇರೆಕಡೆ ತೆಗೆದುಕೊಂಡು ಹೋಗಿ ಮಾರಲು ಅನುಕೂಲವಿರಲಿಲ್ಲ. ಈಗ ಮ್ಯಾನೇಜ್‌ಮೆಂಟ್‌ನವರು ರೈತ ಬೆಳೆದ ಎಲ್ಲಾ ಬೆಳೆಯನ್ನೂ ಖರೀದಿಸಿ ಗ್ರೆಡ್-1, ಗ್ರೆಡ್-2, ಗ್ರೇಡ್-3 ಎಂದು ಮಾಡಿ ಗುಣಮಟ್ಟದ ತರಕಾರಿ, ಹಣ್ಣುಹಂಪಲು ಏನಿರುತ್ತದೆ ಅದನ್ನು ಹಾಪ್‌ಕಾಮ್ಸ್ ನಲ್ಲಿ ಮಾರುತ್ತಿದ್ದಾರೆ. ಗ್ರೇಡ್-2, ಮತ್ತು ಗ್ರೇಡ್-3ನ್ನು ಆ್ಯಕ್ಷನ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಅವರೇನು ಅಕೌಂಟಿಬಿಲಿಟಿ ಬಗ್ಗೆ ಹೇಳಿದ್ದಾರೆ. ಏನು ಅವ್ಯವಹಾರವಾಗಿತ್ತು ಎಂದು ಪಿ.ಎ.ಸಿ. ರವರು ಹೇಳಿದ್ದಾರೆ ಅದರ ಬಗ್ಗೆ ಕಳೆದ ಸರ್ಕಾರದವರು ಏನು ಸಲಹೆಯನ್ನು ಕೊಟ್ಟಿದ್ದರು ಅದರ ಪ್ರಕಾರ ವಿಚಾರಣೆಗೆ ಹಾಕಿದ್ದೇವೆ . ನಮ್ಮ ರಾಜ್ಯದಲ್ಲಿ ಬೆಳೆದ ತರಕಾರಿಯನ್ನು ಹೊರ ರಾಜ್ಯಕ್ಕೆ ಕಳಿಸಿ ಮಾರಾಟ ಮಾಡಿದರೆ ಒಳ್ಳೆಯ ಬೆಲೆ ಸಿಗುತ್ತದೆಂದು ಏನು ಸಲಹೆಯನ್ನು ಕೊಟ್ಟಿದ್ದಾರೆ ಆ ಹಿನ್ನೆಲೆಯಲ್ಲಿ ಏನ್. ಡಿ. ಡಿ. ಬಿ. ಬ್ರಾಂಚ್‌ನ್ನು ಬೆಂಗಳೂರಿನಲ್ಲಿ ತೆರೆಯುತ್ತಿದ್ದೇವೆ. ಅದು ಈ ಮೊದಲು ಆಂಧ್ರಕ್ಕೆ ಹೋಗುವುದಿತ್ತು. ಇದು ಸುಮಾರು ನೂರು ಇನ್ನೂರು ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಅವರು ಇಲ್ಲಿ ಬಂದು ಸುಮಾರು ನಾಲ್ಕುನೂರು ಎಕರೆ ಜಮೀನನ್ನು ವಿಸ್ತರಣೆ ಮಾಡಿಕೊಂಡು ಇಲ್ಲಿ ಬೆಳೆಯುವ ಎಲ್ಲಾ ಹಣ್ಣುಹಂಪಲನ್ನು ಖರೀದಿಸಿ ಕೋಲ್ಡ್ ಸ್ಟೋರೇಜ್‌ನ್ನು ಇಟ್ಟುಕೊಂಡು ಅಪರ ಬ್ಯಾಂಚ್‌ಗಳು ಬಾಂಬೆ, ಡೆಲ್ಲಿ ಮತ್ತು ಕರ್ನಾಟಕದಲ್ಲಿ ಇದೆ. ಯಾವ ರಾಜ್ಯದಲ್ಲಿ ತರಕಾರಿ ಬೆಳೆಯುತ್ತಾರೆ, ಯಾವ ರಾಜ್ಯದಲ್ಲಿ ಕಡಿಮೆ ಬೆಲೆಗೆ ಸಿಗುತ್ತದೆ ಎಂಬ ಎಲ್ಲಾ ಅಂಕಿಅಂಶಗಳು ಅವರಿಗೆ ಗೊತ್ತಿರುತ್ತದೆ. ಅವರ ವಾಹನಗಳೇನು

ಡೆಲ್ಲಿ, ಬಾಂಬೆಗಳಿಗೆ ಹೋಗಿಬರಲು ಇದೆ ಅವರು ವಾಪಸ್ ಹೋಗುವಾಗ ಸುಮ್ಮನೆ ಹೋಗುವುದಿಲ್ಲ. ಇಲ್ಲಿ ಬೆಳೆಯುವ ಬೆಳೆ, ಹಣ್ಣುಹಂಪಲು ಯಾವುದು ಸುಲಭ ರೀತಿಯಲ್ಲಿ ಸಿಗುತ್ತದೋ, ಅಲ್ಲಿ ಏನು ಸಿಗುತ್ತದೋ ನೋಡಿಕೊಂಡು ಖರೀದಿ ಮಾಡುವುದರಿಂದ ಅವರಿಗೆ ಸಾರಿಗೆ ವೆಚ್ಚ ಬಹಳ ಕಡಿಮೆ ಯಾಗುತ್ತದೆ. ಆದ್ದರಿಂದ ಇದು ಅತ್ಯಂತ ಉತ್ತಮವಾದ ಏಜೆನ್ಸಿಯಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳ ಬಯಸುತ್ತೇನೆ.

3.20 ಪಿ.ಎಂ.

ಶ್ರೀಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಉಪಾಧ್ಯಕ್ಷರೇ, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳು ರಾಜ್ಯದಲ್ಲಿ ಅತ್ಯುತ್ತಮವಾದಂತಹ ತೋಟಗಾರಿಕಾ ಬೆಳೆಗಳಿಗೆ ಪ್ರಸಿದ್ಧಿಯಾದಂತಹ ಜಿಲ್ಲೆಗಳಾಗಿವೆ. ಆ ಎರಡು ಜಿಲ್ಲೆಗಳನ್ನು ' ತೋಟಗಾರಿಕಾ ಜಿಲ್ಲೆ ' ಗಳೆಂದು ಸರ್ಕಾರ ಘೋಷಣೆ ಮಾಡಿ ಅಲ್ಲಿಗೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನೂ ಕೂಡ ಒದಗಿಸಿಕೊಟ್ಟರೆ ನಮ್ಮ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ ಸಹಿತ ಅತ್ಯಮೂಲ್ಯವಾದ ಹೆಚ್ಚಿನ ವಿದೇಶಿ ವಿನಿಮಯವನ್ನು ಗಳಿಸಿಕೊಳ್ಳುವ ಅವಕಾಶಗಳು ವಿಫಲವಾಗಿವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಬೀಳಗಿ ಮತಕ್ಷೇತ್ರದ ಜಮಖಂಡಿ ತಾಲ್ಲೂಕಿನ ಸಾವಳಗಿ ಸುತ್ತಮುತ್ತಲೂ ಸುಮಾರು 500 ಎಕರೆ ಜಾಗದಲ್ಲಿ ದ್ರಾಕ್ಷಿ ಬೆಳೆ ಬೆಳೆಯುತ್ತಿದ್ದಾರೆ. ನೂರಾರು ಎಕರೆಗಳಷ್ಟು ಜಾಗದಲ್ಲಿ ದಾಳಿಂಬೆ ಕೂಡ ಬೆಳೆಯಲಾಗುತ್ತಿದೆ. ಆದರೆ ಇಲಾಖೆಯ ವತಿಯಿಂದ ಇದುವರೆಗೂ ಕೂಡ ಅಲ್ಲಿ ಯಾವುದೇ ರೀತಿಯ ಸೌಲಭ್ಯವನ್ನು ಕಲ್ಪಿಸಿಕೊಟ್ಟಿಲ್ಲ. ಕಳೆದ 2-3 ವರ್ಷಗಳಿಂದ ನಾವು ಅಲ್ಲಿ ಶೈತ್ಯಾಗಾರ ನಿರ್ಮಿಸಬೇಕೆಂಬ ಬೇಡಿಕೆಯನ್ನು ಇಡುತ್ತಿದ್ದೇವೆ. ಅದನ್ನು ಸರ್ಕಾರ ಈಗಲಾದರೂ ಈಡೇರಿಸಬೇಕು. ಎಲ್ಲೆಲ್ಲಿ ಏನೇನು ಸವಲತ್ತುಗಳನ್ನು ಒದಗಿಸಿಕೊಟ್ಟರೆ ನಾವು ಈ ಬೆಳೆಗಳನ್ನು ಹೆಚ್ಚು ಅಭಿವೃದ್ಧಿ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಇಲಾಖೆ ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ಇದರ ಜೊತೆಗೆ ಇವತ್ತು ಅಲ್ಲಿ ಬೆಳೆಯು ವಂತಹ ಕಾಯಿಪಲ್ಯೆ ಮತ್ತು ಹಣ್ಣು ಹಂಪಲುಗಳಿಗೆ ಸರಿಯಾದ ಮಾರ್ಕೆಟಿಂಗ್ ಇಲ್ಲದಂತಾ ಗಿದೆ. ನಾವು ಹಾಪ್‌ಕಾಮ್ಸ್ ಅಥವಾ ಬೆಂಗಳೂರಿನ ಮಾರ್ಕೆಟ್‌ಗೆ ಅವುಗಳನ್ನು ತರಬೇಕಾ ಗುತ್ತದೆ. ಒಂದು ವೇಳೆ ಹಾಪ್‌ಕಾಮ್ಸ್‌ಗೆ ತೆಗೆದುಕೊಂಡು ಹೋದರೂ ಸಹಿತ ಲ್ಲಿ ಗ್ರೇಡಿಂಗ್ ಮಾಡುವು ದರಲ್ಲಿ ಬಹಳ ಅನ್ಯಾಯ ಮಾಡಲಾಗುತ್ತಿದೆ. ರೈತರು ತಾವು ಬೆಳೆದ ಬೆಳೆಗಳನ್ನು ಅನಿವಾರ್ಯವಾಗಿ ಕೇಳಿದ ಬೆಲೆಗೆ ಕೊಟ್ಟು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಪ್‌ಕಾಮ್ಸ್‌ನಲ್ಲಿ ಬಹಳ ಅವ್ಯವಹಾರ ನಡೆಯುತ್ತಿದೆ. ಅದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಂಡು ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಿ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ನಾನು ಕೋರುತ್ತೇನೆ. ಇದರ ಜೊತೆಗೆ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿಯೇ ಕಾಯಿಪಲ್ಯೆ ಮತ್ತು ಹಣ್ಣು ಹಂಪಲುಗಳಿಗೆ ಸೂಕ್ತ ಮಾರ್ಕೆಟ್ ಒದಗಿಸುವ ವ್ಯವಸ್ಥೆ ಮಾಡಿದರೆ ರೈತರಿಗೆ ಅಥವಾ ಬೆಳೆಗಾರರಿಗೆ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ ಎಂಬ ವಿಷಯವನ್ನು ನಾನು ಮಾನ್ಯ ಸಚಿವರು ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ಅನುಕಂಪದಿಂದ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಬಹಳಷ್ಟು ಫೆಸಲಿಟೀಸ್ ಕೊಡಬೇಕು, ಅವುಗಳನ್ನು ತೋಟಗಾರಿಕಾ ಜಿಲ್ಲೆಗಳೆಂದು ಡಿಕ್ಲೇರ್ ಮಾಡಬೇಕೆಂದು ಕೋರುತ್ತಿದ್ದಾರೆ. ನಮ್ಮ ಇಲಾಖೆಯಲ್ಲಿ

ಕೇಂದ್ರ ಮತ್ತು ರಾಜ್ಯದ ಬಹಳಷ್ಟು ಯೋಜನೆಗಳಿವೆ. ನಾವು ಪ್ರತಿ ವರ್ಷವೂ ಕೂಡ ಎಲ್ಲಾ ಜಿಲ್ಲೆಗಳಿಗಿಂತ ಆ ಜಿಲ್ಲೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ಅಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸಿ ಪ್ರೋತ್ಸಾಹ ನೀಡುತ್ತಿದ್ದೇವೆ. ಈಗ ಎನ್. ಡಿ. ಡಿ. ಬಿ. ಯಿಂದ ಏನು ಯೋಜನೆ ಬರುತ್ತಿದೆಯೋ, ಆಯೋಜನೆ ಕೂಡ ಕೇವಲ ಬೆಂಗಳೂರಿಗೆ ಸೀಮಿತವಾಗಿರುವುದಿಲ್ಲ. ಇಡೀ ರಾಜ್ಯದಲ್ಲಿ ಅದನ್ನು ವಿಸ್ತರಣೆ ಮಾಡುವುದಕ್ಕೆ ಒಂದು ಯೋಜನೆ ಹಾಕಿಕೊಳ್ಳಲಾಗಿದೆ. ಅಂತಹ ಪ್ರಸಂಗ ಬಂದಲ್ಲಿ ಮೊಟ್ಟ ಮೊದಲನೆಯ ಬ್ರಾಂಚ್ ಅನ್ನು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಕೊಡುತ್ತೇನೆಂದು ಆಶ್ವಾಸನೆ ನೀಡುತ್ತೇನೆ.

ಡಾ: ವೈ.ನಾಗಪ್ಪ (ಹರಿಹರ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ತೋಟಗಾರಿಕಾ ಮಂತ್ರಿಗಳು ಈಗ ತಾನೇ ಮಾತನಾಡುತ್ತಾ ಹರಿಹರದಿಂದ ಪ್ರೋಸಸಿಂಗ್ ಪ್ಲಾಂಟ್ ಹಾಕಬೇಕೆಂದು 2-3 ಬೇಡಿಕೆಗಳು ಬಂದಿವೆ ಎಂದು ಹೇಳಿದರು. ನನಗೆ ಗೊತ್ತಿದ್ದ ಹಾಗೆ ಸುಮಾರು 10-15 ಎಕರೆ ತಾಳೆ ಬೆಳೆ ಅಲ್ಲಿ ಇದೆ. 10-15 ಎಕರೆಗೇ ಇವರು ಬ್ರಾಂಚ್ ಹಾಕುತ್ತಾರೆ ಎಂದರೆ ್ಗಿ ಟ್ಟಿಶಜಾ ಷ್ಟ್ರ ಸಿಜ ಟ್ಟಿಷ್ಟಿಥಿಠ್ಠಿಠ್ಠಿಷಿಠ್ಠಿಸಿ. ಹರಿಹರದಿಂದ ಶಿವಮೊಗ್ಗದವರೆಗೆ ಸುಮಾರು 500-600 ಎಕರೆಗಳಲ್ಲಿನ ತಾಳೆ ಗಿಡಗಳನ್ನು ಬುಡ ಸಮೇತ ಕಿತ್ತು ಹಾಕಿದ್ದಾರೆ. ಏಕೆಂದರೆ ಹಾಕಿದ ರೈತರಿಗೆ ಆದರಿಂದ ಉಪಯೋಗವಾಗಲಿಲ್ಲ, ಸರ್ಕಾರ ಅದರ ಬಗ್ಗೆ ಗಮನಹರಿಸಲಿಲ್ಲ. ರೈತರು ಅದನ್ನು ಹಾಕಿ ಸಾಕಷ್ಟು ಲಾಸ್ ಕೂಡ ಮಾಡಿಕೊಂಡರು. ಲಾಸ್ ಮಾಡಿಕೊಂಡಿದ್ದರಿಂದ ರೈತರು ಆ ಗಿಡವನ್ನು ಕಿತ್ತು ಹಾಕಿ ಇವತ್ತು ಬೇರೆ ಬೆಳೆಯನ್ನು ಬೆಳೆಯುತ್ತಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳಿಗೆ ನಾನು ಹೇಳುವುದೇನೆಂದರೆ, ನೀವು ಏನಾದರೂ ಅಲ್ಲಿ ಎಕ್ಸ್‌ಟ್ರಾಕ್ಷನ್ ಪ್ಲಾಂಟ್ ಅನ್ನು ಹಾಕಬೇಕೆಂದಿದ್ದರೆ ಮೊದಲು ಅಲ್ಲಿ ಸರ್ವೆ ಮಾಡಿಸಿ. ಎಷ್ಟು ಎಕರೆಯಲ್ಲಿ ಅಲ್ಲಿ ತಾಳೆ ಬೆಳೆ ಇದೆ ಎಂಬುದನ್ನು ನೋಡಿಕೊಂಡು ತಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು 100 ಶೈತ್ಯಾಗಾರಗಳನ್ನು ಮುಂದಿನ ದಿನಗಳಲ್ಲಿ ಸರ್ಕಾರದಿಂದ ಸ್ಥಾಪಿಸಲಾಗುವುದು ಎಂದು ಹೇಳಿದ್ದರು ನಿಜ. ಆದರೆ ಅವುಗಳನ್ನು ತೋಟಗಾರಿಕಾ ಇಲಾಖೆಯಿಂದ ಸ್ಥಾಪಿಸುತ್ತಿಲ್ಲ. ನಾವು ಅದಕ್ಕೆ ಎಲ್ಲಾ ತರಹದ ಪ್ರೋತ್ಸಾಹವನ್ನು ಕೊಡುತ್ತೇವೆ. ಪವರ್ ಟ್ಯಾರೀಫ್ ಕೊಡುತ್ತೇವೆ, ಶೈತ್ಯಾಗಾರ ಸ್ಥಾಪನೆಗೆ ಅಗತ್ಯವಾದ ಇನ್‌ಫ್ರಾಸ್ಟ್ರಕ್ಚರ್ ಅಂದರೆ ಜಾಗ ಏನಾದರೂ ಬೇಕಾದರೆ ಎ. ಪಿ. ಎಂ. ಸಿ. ಯಾರ್ಡ್‌ನಲ್ಲಿ ಕೊಡುತ್ತೇವೆ ಎಂದು ಹೇಳಿದ್ದೇವೆ. ನಾವೇ ಶೈತ್ಯಾಗಾರ ಸ್ಥಾಪಿಸತಕ್ಕಂಥ ಪರಿಸ್ಥಿತಿಯಲ್ಲಿ ನಮ್ಮ ಇಲಾಖೆಯ ಆರ್ಥಿಕ ಪರಿಸ್ಥಿತಿ ಇಲ್ಲ. ತಾಳೆ ಫ್ಯಾಕ್ಟರಿಯನ್ನೂ ಕೂಡ ನಾವು ಸ್ವಂತ ನಮ್ಮ ಇಲಾಖೆಯಿಂದ ಸ್ಥಾಪಿಸುವುದಿಲ್ಲ. ಈಗಾಗಲೇ ಅದಕ್ಕೆ ಪ್ರೈವೇಟ್ ಎಂಟರ್‌ಪ್ರೈಸಸ್‌ನವರು ಬಂದಿದ್ದಾರೆ. ಅವರು ನಮ್ಮ ಇಲಾಖೆಯ ಸರ್ವೇಗಿಂತ ತಾವೇ ಸ್ವತಃ ಸರ್ವೆ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಹೇಳಬೇಕಾದರೆ, ಕಳೆದ 8-9 ವರ್ಷಗಳಿಂದ ಈ ಬೆಳೆಯನ್ನು ಬೆಳೆಸುತ್ತಿದ್ದೇವೆ. ಈಗ ಅದು ಫುಲ್ ಫ್ಲೆಡ್ಜ್ ಮೆಚುರಿಟಿ ಆಗುವಂತಹ ಸ್ಟೇಜ್‌ನಲ್ಲಿ ಇದೆ. ಮುಂದಿನ ದಿನಗಳಲ್ಲಿ ಬಹಳಷ್ಟು ಯೀಲ್ಡ್ ಬರುವಂತಹ ಇಂಡಿಕೇಷನ್ಸ್ ಇವೆ. ಆ ದಿಸೆಯಲ್ಲಿ ಬಹಳಷ್ಟು ಇಂಡಸ್ಟ್ರೀಸ್ ನಮ್ಮನ್ನು ಕೇಳಲಿಕ್ಕೆ ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ಅದನ್ನು ಪ್ರೈವೇಟ್ ಎಂಟರ್‌ಪ್ರೈಸಸ್‌ಗೆ ಕೊಡುತ್ತೇವೆ. ಇದರಲ್ಲಿ ಸರ್ಕಾರದವರು ಕೈ ಸುಟ್ಟು ಕೊಳ್ಳುವುದಿಲ್ಲ. ರೈತರ ಹಿತಕ್ಕೋಸ್ಕರ ನಾವು ಈ ಫ್ಯಾಕ್ಟರಿಯನ್ನು ಹಾಕಿಸುತ್ತಿದ್ದೇವೆ. ಅದೂ ಅಲ್ಲದೇ ಮೊನ್ನೆ ತಾನೇ ನಾವು ಇದರ ಬಗ್ಗೆ ಕಾಯ್ದೆಯೊಂದನ್ನು ಈ ಸದನದಲ್ಲಿ ಪಾಸ್ ಮಾಡಿದ್ದೇವೆ. ಪಾಮ್ ಆಯಿಲ್ ಆಕ್ಟ್ ಅನ್ನು ನಾವು ಪಾಸ್ ಮಾಡಿದ್ದೇವೆ. ಇದರಿಂದಾಗಿ ಪಾಮ

ಆಯಿಲ್ ಅನ್ನು ಏನು ಬೆಳೆಯಲಾಗುತ್ತಿದೆ ಅದನ್ನು ಫ್ಯಾಕ್ಟರಿಯವರು ಖರೀದಿಸಲೇಬೇಕು. ಒಂದು ವೇಳೆ ಖರೀದಿಸದಿದ್ದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷಿಸಲೂ ಕೂಡ ಆ್ಯಕ್ಟ್‌ನಲ್ಲಿ ಅವಕಾಶ ಇದೆ. ಹಣ ಕೋಡುವುದರಲ್ಲಿ ಲೇಟ್ ಮಾಡಿದರೆ ಅದಕ್ಕೆ ಇಂಟರೆಸ್ಟ್ ಹಾಕುವಂತಹ ಅವಕಾಶ ಕೂಡ ಕಾಯ್ದೆಯಲ್ಲಿ ಕಲ್ಪಿಸಲಾಗಿದೆ. ಈ ರೀತಿ ಎಲ್ಲಾ ಆಧಾರಗಳನ್ನೂ ಕೂಡ ಇಟ್ಟುಕೊಂಡು ನಾವು ಆ ಕಾಯ್ದೆಯನ್ನು ಪಾಸ್ ಮಾಡಿದ್ದೇವೆ.

ಉಪಾಧ್ಯಕ್ಷರು : ನಾನು ಈಗ 2000-2001ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

> ''ದಿನಾಂಕ 31.3.2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬಂರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು''

ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಯನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 2- ತೋಟಗಾರಿಕೆ

> ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2001ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ತೋಟಗಾರಿಕೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 123,28,56,000 ರೂಪಾಯಿಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು''

ಬೇಡಿಕೆ ಸಂಖ್ಯೆ 3 ಮತ್ತು 53

ಪಶುಸಂಗೋಪನೆ ಮತ್ತು ಸಕ್ಕರೆ ಇಲಾಖೆ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ.

+ ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಪಶು ಸಂಗೋಪನೆ ಮತ್ತು ಸಕ್ಕರೆ ಇಲಾಖೆಗೆ ಸಂಬಂಧಪಟ್ಟ ಹಾಗೆ ಸುಮಾರು 6-7 ಜನ ನಮ್ಮ ವಿರೋಧ ಪಕ್ಷದ ಶಾಸನ ಸಭಾ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ಎಸ್. ಎಸ್. ಪಾಟೀಲ್, ಶಿವಾನಂದ ಪಾಟೀಲ್. ಬಸವರಾಜಪ್ಪ, ಭೈರೇಗೌಡ ಇನ್ನೂ ಹಲವಾರು ಸದಸ್ಯರುಗಳು ಮಾತನಾಡಿ ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ಸವಿಸ್ತಾರವಾದಂತಹ ಚರ್ಚೆ ನಡೆಸಿ ಬೆಳಕನ್ನು ಚೆಲ್ಲಿದ್ದಾರೆ. ಈ ಚರ್ಚೆಯಲ್ಲಿ ಬಹಳ ಮುಖ್ಯವಾಗಿ ಪಶುವೈದ್ಯ ಆಸ್ಪತ್ರೆ ಮತ್ತು ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡುವಂತಹ ಸಂದರ್ಭದಲ್ಲಿ ಸರ್ಕಾರ ಎಲ್ಲಾ ಜಿಲ್ಲೆಗಳಿಗೂ ಅವುಗಳನ್ನು ಸಮನಾಗಿ ಕೊಟ್ಟಿಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದರು.